**ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956**

**ಪ್ರಕರಣಗಳ ಪಟ್ಟಿ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಪ್ರಕರಣಗಳು:


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

2. ಪರಿಭಾಷೆಗಳು

3. ಮುಖ್ಯಮಂತ್ರಿ ಮತ್ತು ಮಂತ್ರಿಗಳ ಸಂಬಳಗಳು

3ಎ. ಸಂಬಳ ಮತ್ತು ಭತ್ಯೆಗಳನ್ನು ಕಡಿಮೆಗೊಳಿಸುವುದು

4. ಮಂತ್ರಿಗಳಿಗೆ ವಾಸದ ಮನೆಗಳು

5. ಮಂತ್ರಿಗಳಿಗೆ ವಾಹನ ಸೌಲಭ್ಯ

6. ಮಂತ್ರಿಗಳು ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ಚಾರ್ಜುಗಳು

6ಎ. ರಾಜ್ಯಮಂತ್ರಿಗಳ ಸಂಬಳಗಳು

6ಬಿ. ರಾಜ್ಯಮಂತ್ರಿಗಳ ನಿವಾಸಗಳು

6ಸಿ. ರಾಜ್ಯಮಂತ್ರಿಗಳಿಗೆ ವಾಹನ ಸೌಲಭ್ಯ

6ಡಿ. ರಾಜ್ಯಮಂತ್ರಿಗಳು ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ಚಾರ್ಜುಗಳು

7. ಉಪಮಂತ್ರಿಗಳ ಸಂಬಳಗಳು

8. ಉಪಮಂತ್ರಿಗಳ ನಿವಾಸಗಳು

9. ಉಪಮಂತ್ರಿಗಳಿಗೆ ವಾಹನ ಸೌಲಭ್ಯ

9ಎ. ಮಂತ್ರಿಗಳಿಂದ ಹೆಲಿಕಾಪ್ಟರ್ ಮತ್ತು ಏರ್‌ಕ್ರಾಫ್ಟ್‌ನ ಬಳಕೆ

9ಬಿ. ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳಲ್ಲಿ ಹೆಚ್ಚಳ

10. ಉಪಮಂತ್ರಿಗಳು ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ಚಾರ್ಜುಗಳು

10ಎ. ಇತರ ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಭರಿಸಬೇಕಾದ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆ ದರಗಳು

10ಬಿ. ಮನೆ ಬಾಡಿಗೆ ಮುಂತಾದುವುಗಳ ಸಂಬಂಧದಲ್ಲಿ ಕಡಿತಗಳು

11. ಮಂತ್ರಿ, ರಾಜ್ಯ ಮಂತ್ರಿ ಅಥವಾ ಉಪಮಂತ್ರಿಗಳು ಅಧಿಕಾರ ವಹಿಸಿಕೊಂಡ ಮೇಲೆ ಅಥವಾ ಅಧಿಕಾರ ತ್ಯಜಿಸಿದ ಮೇಲೆ ಪಡೆಯುವ ಪ್ರಯಾಣ ಭತ್ಯೆಗಳು

12. ಪ್ರವಾಸದ ಮೇಲಿರುವಾಗ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳು

12ಎ. **xxx**

13. ವೈದ್ಯಕೀಯ ಶುಶ್ರೂಷೆ

14. ಮಂತ್ರಿಗಳು, ರಾಜ್ಯ ಮಂತ್ರಿಗಳು ಮತ್ತು ಉಪಮಂತ್ರಿಗಳು ವೃತ್ತಿ ಮುಂತಾದುವುಗಳನ್ನು ನಡೆಸುವಂತಿಲ್ಲ

15. ನಿಯಮ ರಚನಾಧಿಕಾರ

16. 1956ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2ರ ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**1957ರ ಅಧಿನಿಯಮ ಸಂಖ್ಯೆ 5** – ಲಭ್ಯವಿರುವುದಿಲ್ಲ

**II**

**1966ರ ತಿದ್ದುಪಡಿ ಅಧಿನಿಯಮ 26.–** ಭಾರತದ ಹೊರಗಿನ ಪ್ರಯಾಣಗಳಿಗಾಗಿ ಮಂತ್ರಿಗಳಿಗೆ ಮತ್ತು ಉಪಮಂತ್ರಿಗಳಿಗೆ ಸಂದಾಯ ಮಾಡಬೇಕಾದ ಪ್ರಯಾಣ ಮತ್ತು ದಿನ ಭತ್ಯೆಗಳನ್ನು ವಿನಿಯಮಿಸುವುದಕ್ಕೆ ಮೈಸೂರು ಮಂತ್ರಿಗಳ ಸಂಬಳಗಳು ಮತ್ತು ವೇತನಗಳ ಅಧಿನಿಯಮ, 1956ರಲ್ಲಿ ಪ್ರಸ್ತುತ ಯಾವುದೇ ನಿರ್ದಿಷ್ಟ ಉಪಬಂಧವಿರುವುದಿಲ್ಲ. ಈ ಉದ್ದೇಶಕ್ಕಾಗಿ ಉಪಬಂಧವನ್ನು ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ –IV2ಎ, ದಿನಾಂಕ 27ನೇ ಜುಲೈ 1967ರಲ್ಲಿ 3ನೇ ಪುಟದಲ್ಲಿ ಸಂಖ್ಯೆ 130 ಆಗಿ ಪ್ರಕಟವಾಗಿದೆ)

**III**

**1967ರ ತಿದ್ದುಪಡಿ ಅಧಿನಿಯಮ 9.–** ಮಂತ್ರಿಗಳಿಗೆ ಮತ್ತು ಉಪಮಂತ್ರಿಗಳಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳನ್ನು ಸುಮಾರು ಹತ್ತು ವರ್ಷಗಳ ಹಿಂದೆ ನಿಗದಿಪಡಿಸಲಾಗಿತ್ತು. ಪ್ರಸ್ತುತ ಜೀವನ ನಿರ್ವಹಣಾ ವೆಚ್ಚವು ಹೆಚ್ಚಾಗಿರುವ ಹಿನ್ನಲೆಯಲ್ಲಿ ಇವುಗಳನ್ನು ಹೆಚ್ಚಿಸುವುದು ಅವಶ್ಯಕವಾಗಿದೆ. ಉಪಮಂತ್ರಿಗಳು ಅಧಿಕೃತ ಕರ್ತವ್ಯದ ಮೆಲೆ ಪ್ರವಾಸಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಅವರುಗಳಿಗೆ ಮೋಟಾರು ಕಾರುಗಳನ್ನು ಒದಗಿಸುವುದು ಅವಶ್ಯಕವಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ –IV2ಎ, ದಿನಾಂಕ 31ನೇ ಜುಲೈ 1967ರಲ್ಲಿ 4ನೇ ಪುಟದಲ್ಲಿ ಸಂಖ್ಯೆ 160 ಆಗಿ ಪ್ರಕಟವಾಗಿದೆ)

**IV**

**1968ರ ತಿದ್ದುಪಡಿ ಅಧಿನಿಯಮ 17.–** ಮೈಸೂರು ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956 ಮೈಸೂರು ರಾಜ್ಯದ ಮಂತ್ರಿಗಳು ಮತ್ತು ಉಪಮಂತ್ರಿಗಳಿಗೆ ಸಂಬಳಗಳು ಮತ್ತು ಭತ್ಯೆಗಳಿಗಾಗಿ ಉಪಬಂಧ ಕಲ್ಪಿಸುತ್ತದೆ. ಮಂತ್ರಿಗಳು ಮತ್ತು ಉಪಮಂತ್ರಿಗಳ ಜೊತೆಗೆ ರಾಜ್ಯ ಮಂತ್ರಿಗಳನ್ನು ನೇಮಕ ಮಾಡುವ ಪರಿಣಾಮವಾಗಿ, ಅವರುಗಳ ಸಂಬಳಗಳು ಮತ್ತು ಭತ್ಯೆಗಳಿಗಾಗಿಯೂ ಉಪಬಂಧ ಕಲ್ಪಿಸುವುದು ಅವಶ್ಯಕವಾಗಿದೆ. ವಿಧಾನಮಂಡಲದ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ರಾಜ್ಯ ಮಂತ್ರಿಗಳು ಸಂಬಳಗಳು ಮತ್ತು ಭತ್ಯೆಗಳ ಸಂದಾಯಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು.

ಈ ವಿಧೇಯಕದ ಉದ್ದೇಶವು ಅಧ್ಯಾದೇಶವನ್ನು ಬದಲಿಸುವುದಾಗಿದೆ.

ವಾಯು ಮೂಲಕದ ಪ್ರಯಾಣಗಳ ಅವಧಿಯಲ್ಲಿ ಆಗುವ ಅಪಘಾತಗಳಿಗೆ ವಿಮೆಗಾಗಿ ವಿಮಾ ಕಂತುಗಳನ್ನು ಸಂದಾಯ ಮಾಡುವುದಕ್ಕಾಗಿ ನಿರ್ದಿಷ್ಟ ಶಾಸನಬದ್ಧ ಉಪಬಂಧಗಳನ್ನು ಹೊಂದುವುದು ಹೆಚ್ಚು ಯುಕ್ತವಾಗುತ್ತದೆ ಎಂದು ಪರಿಗಣಿಸಲಾಯಿತಾದ್ದರಿಂದ ಈ ಉದ್ದೇಶಕ್ಕಾಗಿ ಅಧ್ಯಾದೇಶದಲ್ಲಿ ಅವಶ್ಯಕ ಉಪಬಂಧವನ್ನು ಕಲ್ಪಿಸಲಾಗಿದೆ.

ಮಂತ್ರಿಗಳು ದೆಹಲಿಯಲ್ಲಿ ತಂಗಿದ್ದಾಗ ಅವರಿಗೆ ಉಚಿತ ಕಾರುಗಳ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧದಲ್ಲಿ ಅವಶ್ಯಕ ಶಾಸನಬದ್ಧ ಉಪಬಂಧಗಳನ್ನು ಕಲ್ಪಿಸುವುದಕ್ಕೆ ಮತ್ತು ಮಂತ್ರಿಗಳು ಪ್ರವಾಸದಲ್ಲಿದ್ದಾಗ ಮುಂದಿನ ಪ್ರಯಾಣವನ್ನು ರೈಲಿನ ಮೂಲಕವಾಗಲಿ ಅಥವಾ ವಾಯು ಮೂಲಕವಾಗಿಯಾಗಲಿ ಕೈಗೊಂಡಾಗ ಬೆಂಗಳೂರಿಗೆ ಮೋಟಾರು ಕಾರನ್ನು ಹಿಂದಕ್ಕೆ ತರುವುದಕ್ಕಾಗಿ ಪೆಟ್ರೋಲ್ ಚಾರ್ಜುಗಳನ್ನು ಸಂದಾಯ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ –IV2ಎ, ದಿನಾಂಕ 26ನೇ ಆಗಸ್ಟ್ 1968ರಲ್ಲಿ 8ನೇ ಪುಟದಲ್ಲಿ ಸಂಖ್ಯೆ 706 ಆಗಿ ಪ್ರಕಟವಾಗಿದೆ)

## V

**1974ರ ಅಧಿನಿಯಮ ಸಂಖ್ಯೆ 18 –** ಲಭ್ಯವಿರುವುದಿಲ್ಲ

## VI

**1976ರ ತಿದ್ದುಪಡಿ ಅಧಿನಿಯಮ 48.–** ಭಾರತದ ಹೊರಗಿನ ಪ್ರಯಾಣ ವೆಚ್ಚ ಹಾಗೆಯೇ ರಾಜಧಾನಿಗಳಲ್ಲಿ ಹಾಗೂ ವಿದೇಶಗಳ ಗ್ರಾಮಾಂತರಗಳಲ್ಲಿ ಜೀವನ ವೆಚ್ಚಗಳು ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ವಾಯು, ರೈಲು ಅಥವಾ ಸಮುದ್ರದ ಮೂಲಕ ಪ್ರಯಾಣಗಳಿಗಾಗಿ ಮಂತ್ರಿಗಳಿಗೆ ದರ್ಜೆಯ ಏಕ ದರವು 1 ಮತ್ತು 1/5 ರಂತೆ ಪ್ರಯಾಣಭತ್ಯೆಯ ಶ್ರೇಣಿಯು ಅನ್ವಯವಾಗುತ್ತದೆ ಮತ್ತು ದಿನಭತ್ಯೆಯು ಪ್ರಯಾಣ ದಿನಗಳಿಗಾಗಿ ಹಾಗೂ ಯಾವುದೇ ಸ್ಥಳದಲ್ಲಿ ತಂಗಿದಾಗಿನ ದಿನಗಳಿಗಾಗಿ ಪ್ರತಿದಿನಕ್ಕೆ ರೂ. 100 ಇದ್ದು ಮತ್ತು ವಿಶೇಷ ಸಂದರ್ಭಗಳಲ್ಲಿ ರೂ. 150 ರಂತೆ ದಿನಭತ್ಯೆಯನ್ನು ಅಧಿಕೃತಗೊಳಿಸಬೇಕೆಂಬ ಉಪಬಂಧವು ಈಗ ಸಾಕಾಗುತ್ತಿಲ್ಲ.

ಕೇಂದ್ರ ಮಂತ್ರಿಗಳ ಸಂಬಳಗಳು ಭತ್ಯೆಗಳ ಅಧಿನಿಯಮದ ಅಡಿಯಲ್ಲಿ ಭಾರತ ಸರ್ಕಾರವು ರಚಿಸಿದ ನಿಯಮಗಳ ಅನುಸಾರವಾಗಿ, ಈ ಉದ್ದೇಶಕ್ಕಾಗಿನ ಉಪಬಂಧವು, ನಿರ್ದಿಷ್ಟ ಮಂಜೂರಾತಿಗನುಸಾರವಾಗಿ ಪ್ರತಿಯೊಂದು ಸಂದರ್ಭದಲ್ಲಿ ಮಂತ್ರಿಗಳ ವಿದೇಶ ಪ್ರವಾಸಗಳ ವೆಚ್ಚವನ್ನು ರಾಷ್ಟ್ರಾಧ್ಯಕ್ಷರು ನಿಯಂತ್ರಿಸತಕ್ಕದ್ದು ಎಂದಿದೆ. ಜೀವನ ನಿರ್ವಹಣಾ ವೆಚ್ಚದಲ್ಲಿ ಹಾಗೂ ಅಲ್ಲಿ ಪಡೆಯುವ ಪ್ರಯಾಣದ ಆಧಾರದ ಮೇಲೆ ರಾಷ್ಟ್ರದಿಂದ ರಾಷ್ಟ್ರಕ್ಕೆ ವಾಸ್ತವಿಕ ವೆಚ್ಚವು ವ್ಯತ್ಯಾಸವಾಗುವುದರಿಂದ, ಅಧಿನಿಯಮವನ್ನು ತಿದ್ದುಪಡಿ ಮಾಡುವ ಮೂಲಕ ಅಂತಹುದ್ದೇ ಉಪಬಂಧವನ್ನು ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ –IV2ಎ, ದಿನಾಂಕ 18ನೇ ಮಾರ್ಚ್ 1976ರಲ್ಲಿ 3ನೇ ಪುಟದಲ್ಲಿ ಸಂಖ್ಯೆ 1533 ಆಗಿ ಪ್ರಕಟವಾಗಿದೆ)

## VII

**1978ರ ತಿದ್ದುಪಡಿ ಅಧಿನಿಯಮ 32.–** ಮಂತ್ರಿಗಳು, ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳ ಸಂಬಳವನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಮಂತ್ರಿಗಳು ಪದವನ್ನು ತ್ಯಜಿಸಿದ ನಿಕಟ ತರುವಾಯದ ಎರಡು ತಿಂಗಳ ಅವಧಿಗಾಗಿ ಕಚೇರಿ ನಿವಾಸಗಳಲ್ಲಿ ಇರುವಂತೆ ಅವಧಿಯನ್ನು ವಿಸ್ತರಿಸುವುದೂ ಒಳಗೊಂಡಂತೆ ಕೆಲವು ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸುವುದು ಕೂಡಾ ಅವಶ್ಯಕವೆಂದು ಪರಿಗಣಿಸಲಾಗಿದೆ ಹಾಗೂ ಈ ಮುಂದಿನವುಗಳನ್ನು ಕಲ್ಪಿಸುವುದೂ ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:–

(i) ಪ್ರತಿ ತಿಂಗಳಿಗೆ ರೂ. 200 ರಂತೆ ಆತಿಥ್ಯ ಭತ್ಯೆಯನ್ನು ಒದಗಿಸುವುದು.

(ii) ಅಧಿಕೃತ ನಿವಾಸದ ಬದಲಿಗೆ ಮನೆ ಬಾಡಿಗೆ ಭತ್ಯೆಯನ್ನು ರೂ. 150ರಂತೆ ಹೆಚ್ಚಿಸುವುದು.

(iii) ವಾಹನ ಭತ್ಯೆಯನ್ನು ಪ್ರತಿ ತಿಂಗಳು ರೂ. 350ರಂತೆ ಹೆಚ್ಚಿಸುವುದು.

(iv) ಮೋಟಾರು ಕಾರುಗಳ ಆಯಿಲ್ ವೆಚ್ಚವನ್ನು ಭರಿಸುವುದು.

(v) ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆಗಾಗಿನ ತಿಂಗಳ ಒಟ್ಟು ಚಾರ್ಜುಗಳಲ್ಲಿ ಮೊದಲ ರೂ. 200 ಗಳನ್ನು ಮಂತ್ರಿ/ರಾಜ್ಯಮಂತ್ರಿಯು ಭರಿಸುವುದು ಮತ್ತು ಹೆಚ್ಚುವರಿ ಮೊತ್ತದಲ್ಲಿ ರೂ. 200 ನ್ನು ಸರ್ಕಾರವು ಭರಿಸುವುದು.

(vi) ಪ್ರಯಾಣ ಭತ್ಯೆಯನ್ನು ಕಿಲೋಮೀಟರ್ ಒಂದಕ್ಕೆ 75 ಪೈಸೆಯಿಂದ ರೂ. 1 ಕ್ಕೆ ಹಾಗೂ ರಾಜ್ಯದೊಳಗಿನ ದಿನಭತ್ಯೆಯನ್ನು ಪ್ರತಿದಿನಕ್ಕೆ ರೂ. 30ರಿಂದ ರೂ. 50ಕ್ಕೆ ಹಾಗೂ ರಾಜ್ಯದ ಹೊರಗಡೆ ತಂಗುವಿಕೆಗೆ ಪ್ರತಿದಿನಕ್ಕೆ ರೂ. 50 ರಿಂದ ರೂ. 75ಕ್ಕೆ ಹೆಚ್ಚಿಸುವುದು.

(vii) 3 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರುವ ಮಂತ್ರಿಗಳು/ರಾಜ್ಯಮಂತ್ರಿಗಳಿಗೆ ಪ್ರತಿ ತಿಂಗಳು ವಿಶ್ರಾಂತಿ ವೇತನ ರೂ. 500 ಹಾಗೂ ಪ್ರತಿ ಹೆಚ್ಚುವರಿ ಒಂದು ವರ್ಷದ ಸೇವೆಗೆ ಹೆಚ್ಚುವರಿ ವಿಶ್ರಾಂತಿ ವೇತನ ರೂ. 50 ಸಂದಾಯ ಮಾಡುವುದು ಮತ್ತು ಇದು ಪ್ರತಿ ತಿಂಗಳಿಗೆ ಗರಿಷ್ಠ ರೂ. 750ಕ್ಕೆ ಒಳಪಟ್ಟಿರತಕ್ಕದ್ದು.

ಮಂತ್ರಿಗಳು ಸಂದಾಯ ಮಾಡುವ ವರಮಾನ ತೆರಿಗೆಯನ್ನು ಸೇರಿಸಿಕೊಳ್ಳಲು ಕೆಲವು ಉಪಬಂಧಗಳನ್ನು ಪೂರ್ವಾನ್ವಯವಾಗಿ ಜಾರಿಗೆ ತರಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ -IV2ಎ, ದಿನಾಂಕ 14ನೇ ಆಗಸ್ಟ್ 1978ರಲ್ಲಿ 8ನೇ ಪುಟದಲ್ಲಿ ಸಂಖ್ಯೆ 1150 ಆಗಿ ಪ್ರಕಟವಾಗಿದೆ)

## VIII

**1979ರ ತಿದ್ದುಪಡಿ ಅಧಿನಿಯಮ 17.–** ಕರ್ನಾಟಕ ಮಂತ್ರಿಗಳ ಸಂಬಳಗಳು, ವಿಶ್ರಾಂತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1978ರ ಮೂಲಕ ತಿದ್ದುಪಡಿಯಾದಂತೆ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 5) ಉಪಬಂಧಗಳ ಅನ್ವಯ,–

(1) ಮಂತ್ರಿಗಳು, ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳಿಗೆ ಹೆಚ್ಚಿಸಲಾದ ವಾಹನ ಭತ್ಯೆಯನ್ನು ಪೂರ್ವಾನ್ವಯ ದಿನಾಂಕದಿಂದ ಸಂದಾಯ ಮಾಡಬೇಕಿತ್ತು;

(2) ರಸ್ತೆ ಮೈಲೇಜನ್ನು ಪ್ರತಿ ಕಿಲೋಮೀಟರ್‌ಗೆ ರೂ. 1 ರಂತೆ ಸಂದಾಯ ಮಾಡಬೇಕಿತ್ತು;

(3) ಹೆಚ್ಚುವರಿ ನಿವೃತ್ತಿ ವೇತನವನ್ನು ಮಂತ್ರಿಗಳಿಗೆ, ರಾಜ್ಯಮಂತ್ರಿಗಳಿಗೆ, ಉಪಮಂತ್ರಿಗಳಿಗೆ, ಪ್ರಿಸೈಡಿಂಗ್ ಅಧಿಕಾರಿಗಳಿಗೆ, ಉಪಪ್ರಿಸೈಡಿಂಗ್ ಅಧಿಕಾರಿಗಳಿಗೆ, ಸರ್ಕಾರದ ಮುಖ್ಯ ಸಚೇತಕರುಗಳಿಗೆ ಮತ್ತು ವಿರೋಧ ಪಕ್ಷದ ನಾಯಕರುಗಳಿಗೆ ಸಂದಾಯ ಮಾಡಬೇಕಿತ್ತು.

ಈ ಮುಂದಿನವುಗಳನ್ನು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:–

(i) ವಾಹನ ಭತ್ಯೆಯನ್ನು ಹೆಚ್ಚುವರಿ ದರದಲ್ಲಿ ಉತ್ತರಾನ್ವಯವಾಗಿ ಮಾತ್ರ, ತಿದ್ದುಪಡಿ ಅಧಿನಿಯಮದ ಪ್ರಕಟಣೆಯ ದಿನಾಂಕ ಎಂದರೆ 26ನೇ ಡಿಸೆಂಬರ್ 1978ರಿಂದ ಜಾರಿಗೆ ಬರುವಂತೆ ಸಂದಾಯ ಮಾಡುವುದು;

(ii) ಪ್ರತಿ ಕಿಲೋಮೀಟರ್‌ಗೆ 0.75 ಪೈಸೆಗೆ ಮೈಲೇಜ್ ಭತ್ಯೆಯ ದರಗಳನ್ನು ಕಡಿಮೆ ಮಾಡುವುದು;

(iii) ಮಂತ್ರಿಗಳಿಗೆ, ರಾಜ್ಯಮಂತ್ರಿಗಳಿಗೆ, ಉಪಮಂತ್ರಿಗಳಿಗೆ ಒದಗಿಸಬೇಕಾದ ನಿವಾಸಿ ಕಟ್ಟಡಗಳ ಗರಿಷ್ಠ ಮೇಲುಪಾಯದ ಪ್ರದೇಶದ ಕುರಿತು ಮತ್ತು ಅಂಥ ಕಟ್ಟಡಗಳನ್ನು ಯಾವ ಶ್ರೇಣಿಯಲ್ಲಿ ಸಜ್ಜುಗೊಳಿಸತಕ್ಕದ್ದೆಂಬುದನ್ನು ಕೂಡಾ ನಿಯಮಗಳ ಮೂಲಕ ನಿಯಮಿಸಲು ಸರ್ಕಾರದ ಅಧಿಕಾರ ನೀಡುವುದು;

(iv) ಮಂತ್ರಿಗಳು, ರಾಜ್ಯಮಂತ್ರಿಗಳು, ಉಪಮಂತ್ರಿಗಳು, ಪ್ರಿಸೈಡಿಂಗ್ ಅಧಿಕಾರಿಗಳು, ಉಪಪ್ರಿಸೈಡಿಂಗ್ ಅಧಿಕಾರಿಗಳು, ಸರ್ಕಾರದ ಮುಖ್ಯ ಸಚೇತಕರು ಮತ್ತು ವಿರೋಧ ಪಕ್ಷದ ನಾಯಕರು ವಿಧಾನಮಂಡಲದ ಸದಸ್ಯರಂತೆ ಅದೇ ವಿಶ್ರಾಂತಿ ವೇತನವನ್ನು ಪಡೆಯತಕ್ಕದ್ದು ಮತ್ತು ಅಧಿನಿಯಮದಲ್ಲಿ ಮಾಡಲಾದ ವಿಶೇಷ ಉಪಬಂಧವನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿದ್ದುದರಿಂದ, ಸದರಿ ಉದ್ದೇಶಕ್ಕಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು, ವಿಶ್ರಾಂತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧ್ಯಾದೇಶ, 1978ನ್ನು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶವು ವಿಧೇಯಕದ ಬದಲಿ ಆಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ -IV2ಎ, ದಿನಾಂಕ 24ನೇ ಜನವರಿ 1979ರಲ್ಲಿ 5ನೇ ಪುಟದಲ್ಲಿ ಸಂಖ್ಯೆ 82 ಆಗಿ ಪ್ರಕಟವಾಗಿದೆ)

## IX

**1979ರ ತಿದ್ದುಪಡಿ ಅಧಿನಿಯಮ 30.–** ಈ ವರ್ಷದ ಮಾರ್ಚ್‌ನ ಕೇಂದ್ರ ಬಡ್ಜೆಟ್‌ನಲ್ಲಿ ಪೆಟ್ರೋಲ್ ಮತ್ತು ಆಯಿಲ್ ದರಗಳಲ್ಲಿ ಹೆಚ್ಚಳವಾಗಿದೆ. ಇದರ ಜೊತೆಗೆ ಈ ಒಪಿಇಸಿ ಕೂಡಾ ಆಯಿಲ್ ದರಗಳನ್ನು ಹೆಚ್ಚಿಸಿ ಘೋಷಣೆ ಮಾಡಿದ್ದು, ಇದರ ಪರಿಣಾಮವು ರಾಷ್ಟ್ರದಲ್ಲಿ ಪೆಟ್ರೋಲ್ ಮತ್ತು ಆಯಿಲ್ ದರಗಳ ಮೇಲಾಗಿದೆ. ಇದರಿಂದಾಗಿ, ಕಳೆದ ಕೆಲವು ತಿಂಗಳುಗಳಿಂದ ಪೆಟ್ರೋಲ್ ದರಗಳು ಹೆಚ್ಚುತ್ತಲಿದೆ. ಆದುದರಿಂದ, ಆಯಿಲ್ ಮತ್ತು ಪೆಟ್ರೋಲ್‌ನ ಹೆಚ್ಚಿಸಲಾದ ದರಗಳೊಂದಿಗೆ ನಿಭಾಯಿಸಲು ಕಿಲೋಮೀಟರೇಜ್ ಭತ್ಯೆಯನ್ನು 75 ಪೈಸೆಯಿಂದ ಒಂದು ರೂಪಾಯಿಗೆ ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಮಂತ್ರಿಗಳಿಗೆ ಮುಂತಾದವರಿಗೆ, ನಿವಾಸಿ ಮನೆಗಳನ್ನು ಖರೀದಿಸುವುದಕ್ಕಾಗಿ, ದುರಸ್ತಿಗಾಗಿ ಮತ್ತು ನಿರ್ಮಾಣ ಮಾಡುವುದಕ್ಕಾಗಿ ಸಾಲಗಳನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸುವುದು ಕೂಡಾ ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ -IV2ಎ, ದಿನಾಂಕ 24ನೇ ಸೆಪ್ಟೆಂಬರ್ 1979ರಲ್ಲಿ 4ನೇ ಪುಟದಲ್ಲಿ ಸಂಖ್ಯೆ 958 ಆಗಿ ಪ್ರಕಟವಾಗಿದೆ)

## X

**1981ರ ತಿದ್ದುಪಡಿ ಅಧಿನಿಯಮ 25.–** 1978ರಲ್ಲಿ ಪ್ರಯಾಣ ಭತ್ಯೆ ಮತ್ತು ಸಾಗಣೆ ಭತ್ಯೆಯನ್ನು ಕಳೆದ ಬಾರಿ ಹೆಚ್ಚಿಸಿದಾಗಿನಿಂದ, ಪೆಟ್ರೋಲ್ ಆಯಿಲ್ ಮತ್ತು ಲ್ಯೂಬ್ರಿಕೆಂಟ್ ಬೆಲೆಗಳು ಗಣನೀಯವಾಗಿ ಹೆಚ್ಚಳವಾಗಿದೆ. ಆದ್ದರಿಂದ ಮಂತ್ರಿಗಳಿಗೆ ಅನ್ವಯವಾಗುವ ಪ್ರಯಾಣ ಭತ್ಯೆ ಮತ್ತು ವಾಹನ ಭತ್ಯೆಯನ್ನು ಅನುಕ್ರಮವಾಗಿ, ಒಂದು ಕಿಲೋಮೀಟರ್‌ಗೆ "ಒಂದು ರೂಪಾಯಿ" ಯಿಂದ "ಒಂದು ರೂಪಾಯಿ ಐವತ್ತು ಪೈಸೆ"ಗೆ ಹಾಗೂ ಒಂದು ತಿಂಗಳಿಗೆ ರೂ. 750/- ರಿಂದ ರೂ. 950/- ಕ್ಕೆ ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ -IV2ಎ, ದಿನಾಂಕ 28ನೇ ಮಾರ್ಚ್ 1981ರಲ್ಲಿ 3ನೇ ಪುಟದಲ್ಲಿ ಸಂಖ್ಯೆ 212 ಆಗಿ ಪ್ರಕಟವಾಗಿದೆ)

## XI

**1984ರ ತಿದ್ದುಪಡಿ ಅಧಿನಿಯಮ 14.–** ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮವನ್ನು, ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು, ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ, (i) ಸರ್ಕಾರದ ಒಡೆತನವಿರುವ ರಾಜ್ಯ ಒಡೆತನದ ಹೆಲಿಕಾಪ್ಟರನ್ನು ಅಥವಾ ಸರ್ಕಾರದ ಒಡೆತನದಲ್ಲಿರಬಹುದಾದ ಒಂದು ಏರ್‌ಕ್ರಾಫ್ಟನ್ನು ಮಂತ್ರಿಗಳು/ರಾಜ್ಯಮಂತ್ರಿಗಳು/ಉಪಮಂತ್ರಿಗಳು ತರುವಾಯದ ದಿನಾಂಕದಲ್ಲಿ ಬಳಸುವುದನ್ನು ನಿಯಂತ್ರಿಸುವುದು (ii) ಎಲ್ಲಿ ಮೋಟಾರು ಕಾರು ಇರುವುದಿಲ್ಲವೋ ಆ ಸ್ಥಳದಲ್ಲಿ ಅಥವಾ ನಿಯಮಿತ ಕಾರು ದುರಸ್ತಿಯಾದಾಗ ಕಾರನ್ನು ಬಾಡಿಗೆ ಪಡೆದಿದ್ದಲ್ಲಿ ಮಂತ್ರಿಗಳು ಪಾವತಿಸಿದ ವಾಸ್ತವಿಕ ಮೋಟಾರು ಕಾರು ಬಾಡಿಗೆ ಚಾರ್ಜುಗಳನ್ನು ಮರುಪಾವತಿಸುವುದು.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ -IV2ಎ, ದಿನಾಂಕ 18ನೇ ಜನವರಿ 1984ರಲ್ಲಿ 3ನೇ ಪುಟದಲ್ಲಿ ಸಂಖ್ಯೆ 51 ಆಗಿ ಪ್ರಕಟವಾಗಿದೆ)

## XII

**1987ರ ತಿದ್ದುಪಡಿ ಅಧಿನಿಯಮ 18.–** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು, ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡಬೇಕೆಂದು ಪ್ರಸ್ತಾವಿಸಲಾಗಿದೆ, ಎಂದರೆ:-

1. ಮುಖ್ಯಮಂತ್ರಿಗಳ ಸಂಬಳವನ್ನು ರೂ. 3,000ಕ್ಕೆ, ಮಂತ್ರಿಗಳ ಸಂಬಳವನ್ನು ರೂ. 2,500ಕ್ಕೆ, ರಾಜ್ಯಮಂತ್ರಿಗಳ ಸಂಬಳವನ್ನು ರೂ. 2,250ಕ್ಕೆ ಮತ್ತು ಉಪಮಂತ್ರಿಗಳ ಸಂಬಳವನ್ನು ರೂ. 2,000 ರಂತೆ ಹೆಚ್ಚಿಸುವುದು.
2. ವಾಹನ ಭತ್ಯೆಯನ್ನು ರೂ. 950ರಿಂದ ರೂ. 2000ಕ್ಕೆ ಹೆಚ್ಚಿಸುವುದು.
3. ಮೈಲೇಜ್ ಭತ್ಯೆಯನ್ನು ಪ್ರತಿ ಕಿಲೋಮೀಟರ್‌ಗೆ ರೂ.1.50 ಪೈಸೆಯಿಂದ ಪ್ರತಿ ಕಿಲೋಮೀಟರ್‌ಗೆ ರೂ.2.50 ಪೈಸೆಗೆ ಹೆಚ್ಚಿಸುವುದು.
4. ತುಟ್ಟಿಭತ್ಯೆಯನ್ನು ರಾಜ್ಯದೊಳಗೆ ರೂ.100ಕ್ಕೆ ಮತ್ತು ರಾಜ್ಯದ ಹೊರಗಡೆ ರೂ.150ಕ್ಕೆ ಹಾಗೂ ಕರ್ತವ್ಯದ ಮೇಲೆ ರಾಷ್ಟ್ರದ ಹೊರಗಿನ ಪ್ರವಾಸಕ್ಕಾಗಿ ಅಥವಾ ವೈದ್ಯಕೀಯ ಚಿಕಿತ್ಸೆಗಾಗಿ ಪ್ರಯಾಣಕ್ಕಾಗಿನ ಪ್ರಯಾಣ ಮತ್ತು ಇತರ ವೆಚ್ಚಗಳನ್ನು ಭಾರತ ಸರ್ಕಾರದ ಮಂತ್ರಿಗಳಿಗೆ ಸಮನಾಗಿ ಹೆಚ್ಚಿಸುವುದು.
5. ಆತಿಥ್ಯ ಭತ್ಯೆಯನ್ನು, ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳ ಸಂಬಂಧದಲ್ಲಿ ರೂ.5,000ಕ್ಕೆ ಮತ್ತು ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳ ಸಂಬಂಧದಲ್ಲಿ ರೂ.4,000ಕ್ಕೆ ಹೆಚ್ಚಿಸುವುದು.
6. ಮಂತ್ರಿಗಳ ತಮ್ಮದೇ ಸ್ವಂತ ಮನೆಯಲ್ಲಿ ವಾಸವಿದ್ದಲ್ಲಿ ಅವರಿಗೆ ಮನೆ ಬಾಡಿಗೆ ಭತ್ಯೆಯ ಪಾವತಿಯನ್ನು ಪ್ರತಿ ತಿಂಗಳಿಗೆ ರೂ.1,000ಕ್ಕೆ ಹೆಚ್ಚಿಸುವುದು.

ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಕೂಡಾ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ –IV2ಎ, ದಿನಾಂಕ 2ನೇ ಏಪ್ರಿಲ್ 1987ರಲ್ಲಿ 4ನೇ ಪುಟದಲ್ಲಿ ಸಂಖ್ಯೆ 275 ಆಗಿ ಪ್ರಕಟವಾಗಿದೆ)

### XIII

**1991ರ ತಿದ್ದುಪಡಿ ಅಧಿನಿಯಮ 6.–** ಮಂತ್ರಿಗಳ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೌಲಭ್ಯಗಳನ್ನು ಹೆಚ್ಚಿಸುವುದನ್ನು ಪರಿಗಣಿಸಲು ರಚಿಸಲಾದ ಸಮಿತಿಯ ಶಿಫಾರಸ್ಸುಗಳ ಮೇರೆಗೆ, ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ಕ್ಕೆ ಈ ಮುಂದಿನ ತಿದ್ದುಪಡಿಗಳನ್ನು ಪ್ರಸ್ತಾವಿಸಲಾಯಿತು, ಎಂದರೆ:–

(i) ಆತಿಥ್ಯ ಭತ್ಯೆಯನ್ನು ಮುಖ್ಯಮಂತ್ರಿ ಮತ್ತು ಮಂತ್ರಿಗಳಿಗೆ ಪ್ರತಿ ತಿಂಗಳಿಗೆ ರೂ. 10,000ಕ್ಕೆ ಹಾಗೂ ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳ ಸಂಬಂಧದಲ್ಲಿ ಪ್ರತಿ ತಿಂಗಳಿಗೆ ರೂ. 8,000ಕ್ಕೆ ಹೆಚ್ಚಿಸುವುದು.

(ii) ಮಂತ್ರಿಗಳು ತಮ್ಮ ಸ್ವಂತ ಮನೆಗಳಲ್ಲಿ ವಾಸವಿದ್ದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪ್ರತಿ ತಿಂಗಳಿಗೆ ರೂ. 5,000/–ಕ್ಕೆ ಹೆಚ್ಚಿಸುವುದು.

(iii) 300 ಲೀಟರ್ ಪೆಟ್ರೋಲ್‌ಗೆ ಸಮನಾದ ಬೆಲೆಯನ್ನು ಪ್ರತಿ ತಿಂಗಳು ವಾಹನ ಭತ್ಯೆಯಾಗಿ ನೀಡುವುದು.

(iv) ರಾಜ್ಯದ ಹೊರಗೆ ಪ್ರವಾಸದಲ್ಲಿದ್ದಾಗ ದಿನಭತ್ಯೆಯನ್ನು ರೂ. 250/– ದರದಲ್ಲಿ ಹೆಚ್ಚಿಸುವುದು.

ಆದ್ದರಿಂದ ಈ ವಿಧೇಯಕ.

(1990ರ ವಿಧಾನಸಭೆ ವಿಧೇಯಕ ಸಂಖ್ಯೆ 32ರಿಂದ ಪಡೆಯಲಾಗಿದೆ)

### XIV

**1994ರ ತಿದ್ದುಪಡಿ ಅಧಿನಿಯಮ 7.–** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವ ಮೂಲಕ ಮುಖ್ಯಮಂತ್ರಿಗಳು, ಕ್ಯಾಬಿನೆಟ್ ಮಂತ್ರಿಗಳು ಮತ್ತು ರಾಜ್ಯಮಂತ್ರಿಗಳ ಭತ್ಯೆಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(1994ರ ವಿಧಾನಸಭೆ ವಿಧೇಯಕ ಸಂಖ್ಯೆ 1ರಿಂದ ಪಡೆಯಲಾಗಿದೆ)

### XV

**1997ರ ತಿದ್ದುಪಡಿ ಅಧಿನಿಯಮ 20.–** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವ ಮೂಲಕ ಮಂತ್ರಿಗಳು, ಉಪಮಂತ್ರಿಗಳು ಮತ್ತು ರಾಜ್ಯಮಂತ್ರಿಗಳ ಭತ್ಯೆಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(1997ರ ವಿಧಾನಸಭೆ ವಿಧೇಯಕ ಸಂಖ್ಯೆ 36ರಿಂದ ಪಡೆಯಲಾಗಿದೆ)

### XVI

**2001ರ ತಿದ್ದುಪಡಿ ಅಧಿನಿಯಮ 13.–** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವ ಮೂಲಕ ಮುಖ್ಯಮಂತ್ರಿಗಳು, ಕ್ಯಾಬಿನೆಟ್ ಮಂತ್ರಿಗಳು ಮತ್ತು ರಾಜ್ಯಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದುದರಿಂದ ಈ ವಿಧೇಯಕ.

(2000ರ ವಿಧಾನಸಭೆ ವಿಧೇಯಕ ಸಂಖ್ಯೆ 44ರಿಂದ ಪಡೆಯಲಾಗಿದೆ)

### XVII

**2005ರ ತಿದ್ದುಪಡಿ ಅಧಿನಿಯಮ 23.–** ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳನ್ನು 2000ನೇ ವರ್ಷದಲ್ಲಿ ಕಳೆದ ಬಾರಿ ಪರಿಷ್ಕರಿಸಲಾಗಿದ್ದು, ತದನಂತರ ಜೀವನ ನಿರ್ವಹಣಾ ವೆಚ್ಚದಲ್ಲಿ ಗಣನೀಯವಾಗಿ ಹೆಚ್ಚಳವುಂಟಾಗಿದೆ ಮತ್ತು ಹಣದ ಮೌಲ್ಯವು ತುಲನಾತ್ಮಕವಾಗಿ ಇಳಿಮುಖವಾಗಿದೆ.

ಆದುದರಿಂದ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವ ಮೂಲಕ ಮಂತ್ರಿಗಳ, ರಾಜ್ಯಮಂತ್ರಿಗಳ ಮತ್ತು ಉಪಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳನ್ನು ಹೆಚ್ಚಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2005ರ ವಿಧಾನಸಭೆ ವಿಧೇಯಕ ಸಂಖ್ಯೆ 20]

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 40ನೇ ನಮೂದು.]

## XVIII

**2011ರ ತಿದ್ದುಪಡಿ ಅಧಿನಿಯಮ 33.–** ಪ್ರಸ್ತುತ ಜೀವನ ನಿರ್ವಹಣಾ ವೆಚ್ಚದಲ್ಲಿ ಸಾಕಷ್ಟು ಹೆಚ್ಚಳವಾಗಿದೆ. ಮುಖ್ಯಮಂತ್ರಿಗಳ, ಮಂತ್ರಿಗಳ, ರಾಜ್ಯಮಂತ್ರಿಗಳ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ಬಹಳ ಕಾಲದಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ, ಪ್ರಸ್ತಾವಿತ ತಿದ್ದುಪಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಸಂಬಳಗಳು, ಮನೆ ಬಾಡಿಗೆ ಭತ್ಯೆಗಳು, ವಾಹನ ಭತ್ಯೆ ಮತ್ತು ಪ್ರಯಾಣ ಭತ್ಯೆ ಹಾಗೂ ತುಟ್ಟಿಭತ್ಯೆಗಳ ದರಗಳನ್ನು ಪರಿಷ್ಕರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನಸಭೆ ವಿಧೇಯಕ ಸಂಖ್ಯೆ 25, ಕಡತ ಸಂಖ್ಯೆ ಸಂವ್ಯಶಾಇ 41 ಶಾಸನ 2006]

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 40ನೇ ನಮೂದು.]

## XIX

**2015ರ ತಿದ್ದುಪಡಿ ಅಧಿನಿಯಮ 19.–** ಪ್ರಸ್ತುತ ಜೀವನ ನಿರ್ವಹಣಾ ವೆಚ್ಚದಲ್ಲಿ ಸಾಕಷ್ಟು ಹೆಚ್ಚಳವಾಗಿದೆ. ಮುಖ್ಯಮಂತ್ರಿಗಳ, ಮಂತ್ರಿಗಳ, ರಾಜ್ಯಮಂತ್ರಿಗಳ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ಬಹಳ ಕಾಲದಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ, ಸಂಬಳ, ಮನೆಬಾಡಿಗೆ ಭತ್ಯೆ, ಆತಿಥ್ಯ ಭತ್ಯೆ, ವಾಹನ ಭತ್ಯೆಗಳು ಇತ್ಯಾದಿಗಳ ಪರಿಷ್ಕರಣೆಗಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2015ರ ವಿಧಾನಸಭೆ ವಿಧೇಯಕ ಸಂಖ್ಯೆ 16, ಕಡತ ಸಂಖ್ಯೆ ಸಂವ್ಯಶಾಇ 31 ಶಾಸನ 2014]

(ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 40ನೇ ನಮೂದು.]

## XX

**2020ರ ತಿದ್ದುಪಡಿ ಅಧಿನಿಯಮ 24.**-ಭಾರತದ ಉಳಿದ ಕಡೆಗಳಂತೆ ಕರ್ನಾಟಕವು, ರಾಜ್ಯದ ಜನತೆಯ ಆರೋಗ್ಯ ಮತ್ತು ಹಣಕಾಸಿನ ಮೇಲೆ ತೀವ್ರವಾದ ಸಂಕೀರ್ಣ ಪರಿಣಾಮವುಂಟು ಮಾಡಿರುವ ಕೊರೊನಾ ರೋಗಾಣು (ಕೋವಿಡ್-19) ಸಾಂಕ್ರಾಮಿಕ ರೋಗದೊಂದಿಗೆ ಹೋರಾಡುತ್ತಿದೆ.

ಕೊರೊನಾ ರೋಗಾಣು (ಕೋವಿಡ್-19) ಸಾಂಕ್ರಾಮಿಕ ರೋಗವು ಶೀಘ್ರ ಪರಿಹಾರ ಮತ್ತು ನೆರವಿನ ಮಹತ್ವವನ್ನು ತೋರಿಸಿದ್ದು, ಸದರಿ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಕೆಲವು ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯವಾಗಿದೆ.

ಅಂಥ ಸನ್ನಿವೇಶವನ್ನು ನಿಭಾಯಿಸಲು ಮತ್ತು ನಿಯಂತ್ರಿಸಲು ಮುಖ್ಯಮಂತ್ರಿ, ಮಂತ್ರಿ ರಾಜ್ಯ ಮಂತ್ರಿ ಮತ್ತು ಉಪಮಂತ್ರಿ, ಸಭಾಪತಿ, ಉಪಸಭಾಪತಿ, ಸಭಾಧ್ಯಕ್ಷ, ಉಪಸಭಾಧ್ಯಕ್ಷ, ವಿರೋಧಪಕ್ಷದ ನಾಯಕ ಸರ್ಕಾರದ ಮುಖ್ಯ ಸಚೇತಕ, ವಿರೋಧಪಕ್ಷದ ಮುಖ್ಯ ಸಚೇತಕ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳನ್ನು ಕಡಿಮೆಗೊಳಿಸುವ ಮೂಲಕ ಸಂಪನ್ಮೂಲಗಳನ್ನು ಹೆಚ್ಚಿಸುವುದು ಅವಶ್ಯಕವಾಗಿದೆ;

ಆದ್ದರಿಂದ, ಕರ್ನಾಟಕ ವಿಧಾನ ಮಂಡಲದ ಸಂಬಳಗಳು, ನಿವೃತ್ತಿವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ 2) ಮತ್ತು ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ 5) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಮೇಲಿನ ಉದ್ದೇಶಗಳನ್ನು ಸಾಧಿಸಲು ಕರ್ನಾಟಕ ವಿಧಾನ ಮಂಡಲದ ಸಂಬಳಗಳು, ನಿವೃತ್ತಿವೇತನಗಳು ಮತ್ತು ಭತ್ಯೆಗಳು ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 4) ಪ್ರಖ್ಯಾಪಿಸಲಾಯಿತು.

ಈ ವಿಧೇಯಕವು ಮೇಲಿನ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನ ಸಭೆ ವಿಧೇಯಕ ಸಂಖ್ಯೆ.29, ಕಡತ ಸಂಖ್ಯೆ.ಸಂವ್ಯಶಾಇ 29 ಶಾಸನ 2020]

[ಭಾರತ ಸಂವಿಧಾನದ ಏಳನೇ ಅನುಚ್ಛೇಧದ IIನೇ ಪಟ್ಟಿಯ 6ನೇ ನಮೂದು]

## XXI

**2022ರ ತಿದ್ದುಪಡಿ ಅಧಿನಿಯಮ 13.–** ಪ್ರಸ್ತುತ ಜೀವನ ನಿರ್ವಹಣಾ ವೆಚ್ಚದಲ್ಲಿ ಸಾಕಷ್ಟು ಹೆಚ್ಚಳವಾಗಿದೆ. ಮುಖ್ಯಮಂತ್ರಿಗಳ, ಮಂತ್ರಿಗಳ, ರಾಜ್ಯ ಮಂತ್ರಿಗಳ ಮತ್ತು ಉಪ ಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ದೀರ್ಘಕಾಲದಿಂದ ಪರಿಷ್ಕರಿಸಿರುವುದಿಲ್ಲ. ಆದ್ದರಿಂದ, ಸಂಬಳ, ಮನೆಬಾಡಿಗೆ ಭತ್ಯೆ, ಆತಿಥ್ಯ ಭತ್ಯೆ, ವಾಹನ ಭತ್ಯೆಗಳು ಇತ್ಯಾದಿಗಳ ಪರಿಷ್ಕರಣೆಗಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2022ರ ವಿಧಾನಸಭೆಯ ವಿಧೇಯಕ ಸಂಖ್ಯೆ: 05, ಕಡತ ಸಂಖ್ಯೆ: ಸಂವ್ಯಶಾಇ 03 ಶಾಸನ 2022]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 40ನೇ ನಮೂದನೆಯಡಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ: 103, ದಿನಾಂಕ: 11.03.2022ರಲ್ಲಿ ಪ್ರಕಟಣೆಗೊಂಡಿದೆ]

## 1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 5

(1957ರ ಜನವರಿ ಇಪ್ಪತ್ತೆಂಟನೇ ದಿನದಂದು [1][ಕರ್ನಾಟಕ ರಾಜ್ಯಪತ್ರದಲ್ಲಿ][1] ಮೊದಲು ಪ್ರಕಟಿಸಲಾಯಿತು)

## [1][ಕರ್ನಾಟಕ][1] ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956

(1957ರ ಜನವರಿ ಇಪ್ಪತ್ತೇಳನೇ ದಿನದಂದು ರಾಜ್ಯಪಾಲರ ಒಪ್ಪಿಗೆ ಪಡೆಯಲಾಗಿದೆ)

*(1966ರ 26, 1967ರ 9, 1968ರ 17, 1974ರ 18, 1976ರ 48, 1978ರ 32, 1979ರ 17, 1979ರ 30, 1981ರ 25, 1984ರ 14, 1987ರ 18, 1991ರ 6, 1994ರ 7, 1997ರ 20, 2001ರ 13, 2005ರ 23, 2011ರ 33 2015ರ 19, 2020ರ 24 ಮತ್ತು 2022ರ 13– ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ).*

[1][ಕರ್ನಾಟಕ ರಾಜ್ಯದ][1] ಮಂತ್ರಿಗಳ, [3][ರಾಜ್ಯಮಂತ್ರಿಗಳ ಮತ್ತು ಉಪಮಂತ್ರಿಗಳ][3] [2][ಸಂಬಳಗಳು ಮತ್ತು ಭತ್ಯೆಗಳು][2] ಮತ್ತು ಕೆಲವು ಇತರ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

[1][ಕರ್ನಾಟಕ ರಾಜ್ಯದ][1] ಮಂತ್ರಿಗಳ, [3][ರಾಜ್ಯಮಂತ್ರಿಗಳ ಮತ್ತು ಉಪಮಂತ್ರಿಗಳ][3] [2][ಸಂಬಳಗಳು ಮತ್ತು ಭತ್ಯೆಗಳು][2] ಮತ್ತು ಕೆಲವು ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1979ರ ಅಧಿನಿಯಮ 17ರ ಮೂಲಕ ದಿನಾಂಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.19688 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಮಂತ್ರಿಗಳ [2][ಸಂಬಳಗಳು ಮತ್ತು ಭತ್ಯೆಗಳ][2] ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು 1956ರ ನವೆಂಬರ್ ಮೊದಲನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1979ರ ಅಧಿನಿಯಮ 17ರ ಮೂಲಕ ದಿನಾಂಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ರೈಲು ಪ್ರಯಾಣಗಳಿಗೆ ಸಂಬಂಧಿಸಿದಂತೆ 'ಅತ್ಯುನ್ನತ ದರ್ಜೆ' ಎಂಬುದು ರೈಲಿನಲ್ಲಿ ಲಭ್ಯವಿರುವ ಹವಾನಿಯಂತ್ರಿತ ಸ್ಥಳಾವಕಾಶವನ್ನು ಒಳಗೊಳ್ಳುತ್ತದೆ;

[1][(ಬಿ) 'ಮಂತ್ರಿಗಳು', 'ರಾಜ್ಯಮಂತ್ರಿಗಳು' ಮತ್ತು 'ಉಪಮಂತ್ರಿಗಳು' ಎಂದರೆ ಅನುಕ್ರಮವಾಗಿ 'ಮಂತ್ರಿಗಳು', 'ರಾಜ್ಯಮಂತ್ರಿಗಳು' ಮತ್ತು 'ಉಪಮಂತ್ರಿಗಳು' ಮತ್ತು ಮುಖ್ಯಮಂತ್ರಿಯೂ ಒಳಗೊಳ್ಳುತ್ತಾರೆ.][1]

(ಸಿ) 'ನಿಯಮಿಸಲಾದುದು' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಡಿ) 'ವಾಸದ ಮನೆ'ಯ ಸಿಬ್ಬಂದಿ ವಸತಿಗಳು ಮತ್ತು ಅದಕ್ಕೆ ಲಗತ್ತಾದ ಕಟ್ಟಡಗಳು ಮತ್ತು ತೋಟಗಳನ್ನು ಒಳಗೊಳ್ಳುತ್ತದೆ;

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**3. ಮುಖ್ಯಮಂತ್ರಿ ಮತ್ತು ಮಂತ್ರಿಗಳ ಸಂಬಳಗಳು.–** (1) ಮುಖ್ಯಮಂತ್ರಿಗೆ ಒಂದು ತಿಂಗಳಿಗೆ [4][[3][[2][ಎಪ್ಪತ್ತೈದು ಸಾವಿರ ರೂಪಾಯಿಗಳ][2]][3]][4] ಸಂಬಳ ಮತ್ತು ಪ್ರತಿಯೊಬ್ಬ ಮಂತ್ರಿಗೆ ಒಂದು ತಿಂಗಳಿಗೆ [4][[3][[2][ಅರವತ್ತು ಸಾವಿರ ರೂಪಾಯಿಗಳ][2]][3]][4] ಸಂಬಳವನ್ನು ಸಂದಾಯ ಮಾಡತಕ್ಕದ್ದು. ಅವರಿಗೆ ಒಂದು ವರ್ಷಕ್ಕೆ [4][[3][[2][ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿಗಳ][2]][3]][4] ಆತಿಥ್ಯ ಭತ್ಯೆಯನ್ನು ಕೂಡಾ ಸಂದಾಯ ಮಾಡತಕ್ಕದ್ದು.][1]

1. 1987ರ ಅಧಿನಿಯಮ 18ರ ಮೂಲಕ ದಿನಾಂಕ 01.04.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**3ಎ. ಸಂಬಳ ಮತ್ತು ಭತ್ಯೆಗಳನ್ನು ಕಡಿಮೆಗೊಳಿಸುವುದು.-** ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ರಲ್ಲಿ (1957ರ ಕರ್ನಾಟಕ ಅಧಿನಿಯಮ 5) ಏನೇ ಒಳಗೊಂಡಿದ್ದರೂ,

ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗೆ ಪಾವತಿಸಬೇಕಾದ ಸಂಬಳಗಳು ಮತ್ತು ಭತ್ಯೆಗಳನ್ನು, ಕೊರೊನಾ ರೋಗಾಣು (ಕೋವಿಡ್-19) ಸಾಂಕ್ರಾಮಿಕ ರೋಗದಿಂದ ಉಂಟಾಗುವ ಅಗತ್ಯಗಳನ್ನು ಪೂರೈಸುವ ಸಲುವಾಗಿ 2020ರ ಏಪ್ರಿಲ್ 1ನೇ ದಿನದಿಂದ ಪ್ರಾರಂಭವಾಗಿ ಒಂದು ವರ್ಷದ ಅವಧಿಗಾಗಿ ಶೇಕಡಾ ಮೂವತ್ತನ್ನು ಕಡಿಮೆಗೊಳಿಸತಕ್ಕದ್ದು.][1]

1. 2020ರ ಅಧಿನಿಯಮ 24ರ ಮೂಲಕ ದಿನಾಂಕ 01.04.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**4. ಮಂತ್ರಿಗಳಿಗೆ ವಾಸದ ಮನೆಗಳು.–** (1) ಪ್ರತಿಯೊಬ್ಬ ಮಂತ್ರಿಯು, [1][xxx][1] ಬೆಂಗಳೂರು ನಗರದಲ್ಲಿ ತಮ್ಮ ಅಧಿಕಾರಾವಧಿ ಇರುವ ತನಕ ಮತ್ತು ನಿಕಟ ತರುವಾಯದ [2][ಅರವತ್ತು ದಿನಗಳ][2] ಅವಧಿಯವರೆಗೆ ಸುಸಜ್ಜಿತ ನಿವಾಸವನ್ನು ಬಳಸಲು ಅಥವಾ ಅಂಥ ಸುಸಜ್ಜಿತ ನಿವಾಸದ ಬದಲಿಗೆ ಪ್ರತಿ ತಿಂಗಳು [6][[5][[3][ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ]][3]][5]][6] ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. [4][ಈ ಉಪಪ್ರಕರಣದ ಅಡಿಯಲ್ಲಿ ಒದಗಿಸಲಾದ ನಿವಾಸವನ್ನು ಗೊತ್ತುಪಡಿಸಬಹುದಾದದ ಅಂಥ ಪ್ರಮಾಣದಲ್ಲಿ ಸಜ್ಜುಗೊಳಿಸತಕ್ಕದ್ದು ಮತ್ತು ಅದರ ಮೇಲುಪಾಯದ ಒಟ್ಟು ವಿಸ್ತೀರ್ಣವು ಅಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ.][4]

1. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1979ರ ಅಧಿನಿಯಮ 17ರ ಮೂಲಕ ದಿನಾಂಕ 27.12.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 19ರ ಮೂಲಕ ದಿನಾಂಕ 04.03.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸುಸಜ್ಜಿತ ನಿವಾಸಕ್ಕೆ ಬದಲಾಗಿ ಮನೆ ಬಾಡಿಗೆ ಭತ್ಯೆಕ್ಕೆ ಹಕ್ಕುಳ್ಳ ಮಂತ್ರಿಗಳು ಬಳಸುವ ನಿವಾಸದಲ್ಲಿ, ಅಧಿಕೃತ ಉದ್ದೇಶಗಳ ಬಳಕೆಗಾಗಿ, ನಿಯಮಿಸಲಾದ ಅಂಥ ಅಳತೆಯಲ್ಲಿ ರಾಜ್ಯ ಸರ್ಕಾರವು ಮೂರು ಕೋಣೆಗಳನ್ನು ಸುಸಜ್ಜಿತಗೊಳಿಸತಕ್ಕದ್ದು. [1][ಅವರು ಪ್ರತಿ ತಿಂಗಳು, ನಿವಾಸದ ನಿರ್ವಹಣೆ ಮತ್ತು ಸ್ವಚ್ಛತೆಗಾಗಿ ಮತ್ತು ಅಂಥ ನಿವಾಸದಲ್ಲಿ ಇರುವ ತೋಟಗಳ ವಿನ್ಯಾಸ ಮತ್ತು ನಿರ್ವಹಣೆಗಾಗಿ [4][[3][[2][ಮೂವತ್ತು ಸಾವಿರ ರೂಪಾಯಿಗಳ]][2]][3]][4] ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. 1994ರ ಅಧಿನಿಯಮ 7ರ ಮೂಲಕ ದಿನಾಂಕ 01.09.1993ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ 04.03.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**5. ಮಂತ್ರಿಗಳಿಗೆ ವಾಹನ ಸೌಲಭ್ಯ.–** (1) ರಾಜ್ಯ ಸರ್ಕಾರವು ಪ್ರತಿಯೊಬ್ಬ ಮಂತ್ರಿಯ ಬಳಕೆಗಾಗಿ ಒಂದು ಸೂಕ್ತ ಮೋಟಾರು ಕಾರನ್ನು ಒದಗಿಸಬಹುದು.

(2) ಪ್ರತಿಯೊಬ್ಬ ಮಂತ್ರಿಗೆ ಸರ್ಕಾರವು ಪ್ರತಿ ತಿಂಗಳು [4][[3][[2][ಎರಡು ಸಾವಿರ ಲೀಟರ್][4] ಪೆಟ್ರೋಲ್][2]][3] [1][ದರಗಳ ವೆಚ್ಚಕ್ಕೆ ಸಮನಾದ][1] ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

1. 1991ರ ಅಧಿನಿಯಮ 6ರ ಮೂಲಕ ದಿನಾಂಕ 1.11.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಮಂತ್ರಿಗಳು ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ಚಾರ್ಜುಗಳು.–** (1) ಪ್ರತಿಯೊಬ್ಬ ಮಂತ್ರಿಯು, ಅವರ ಉಪಯೋಗಕ್ಕಾಗಿ 4ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು 5ನೇ ಪ್ರಕರಣದ ಅಡಿಯಲ್ಲಿ ಅವರಿಗೆ ಹಂಚಿಕೆಯಾದ ನಿವಾಸಕ್ಕೆ ಮತ್ತು ಮೋಟಾರು ಕಾರ್‌ಗೆ ಸಂಬಂಧಿಸಿದಂತೆ ಅವರುಗಳು ಈ ಮುಂದಿನ ಚಾರ್ಜುಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:–

[1][(ಎ) ಅವರಿಗೆ ಸಂಬಂಧಿಸಿದ ಮೋಟಾರು ಕಾರುಗಳಿಗೆ ಅಗತ್ಯವಾದ ಸರ್ಕಾರವು ಸಂದಾಯ ಮಾಡುವ [4][[3][[2][ಮೂರು ಸಾವಿರ ಲೀಟರುಗಳ]][2]][3]][4] ಪೆಟ್ರೋಲು ವೆಚ್ಚಕ್ಕೆ ಹೆಚ್ಚುವರಿಯಾದ ಪೆಟ್ರೋಲು ವೆಚ್ಚ;][1]

1. 1991ರ ಅಧಿನಿಯಮ 6ರ ಮೂಲಕ ದಿನಾಂಕ 1.11.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) ವಾಸದ ಮನೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆಗಾಗಿ ಅವೆರಡರ ಒಟ್ಟು ಮಾಸಿಕ ದರದ ಮೊದಲ ಇನ್ನೂರು ರೂಪಾಯಿಗಳು.][1]

1. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆ ಮತ್ತು 5ನೇ ಪ್ರಕರಣದ ಮೇರೆಗೆ ಒದಗಿಸಿದ ಮೋಟಾರು ಕಾರು ಇವುಗಳ ದುರಸ್ತಿ ಖರ್ಚು ಸೇರಿದಂತೆ ಅವುಗಳ ನಿರ್ವಹಣೆ ಹಾಗೂ ಸುಸ್ಥಿತಿಗಾಗಿನ ಎಲ್ಲಾ ಇತರ ವೆಚ್ಚಗಳು, ಅಂಥ ಮೋಟಾರು ಕಾರುಗಳ ಚಾಲಕರು ಮತ್ತು ಕ್ಲೀನರ್‌ಗಳ ಸಂಬಳಗಳು ಮತ್ತು ಭತ್ಯೆಗಳು ಮತ್ತು ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗಳಿಗೆ ಸೇರಿದ ತೋಟಗಳ ರೂಪರೇಷೆ ಮತ್ತು ಅದರ ನಿರ್ವಹಣೆಗಾಗಿನ ಎಲ್ಲಾ ವೆಚ್ಚಗಳು, ಇವುಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

[1][**6ಎ. ರಾಜ್ಯ ಮಂತ್ರಿಗಳ ಸಂಬಳಗಳು.–** ಪ್ರತಿಯೊಬ್ಬ ರಾಜ್ಯ ಮಂತ್ರಿಗೆ ಪ್ರತಿ ತಿಂಗಳಿಗೆ [5][[4][[2][ಐವತ್ತು ಸಾವಿರ ರೂಪಾಯಿಗಳ]][2]][4]][5] ಸಂಬಳವನ್ನು ಮತ್ತು [3][ಪ್ರತಿ ತಿಂಗಳಿಗೆ [5][[4][[2][ಮೂರು ಲಕ್ಷ ರೂಪಾಯಿಗಳ]][2]][4]][5] ಆತಿಥ್ಯ ಭತ್ಯೆಯನ್ನು]][3] ಸಂದಾಯ ಮಾಡತಕ್ಕದ್ದು.

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.19688ರಿಂದ 6ಎ ಯಿಂದ 6ಡಿ ಪ್ರಕರಣಗಳನ್ನು ಸೇರಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1978ರ ಅಧಿನಿಯಮ 32ರ ಮೂಲಕ ದಿನಾಂಕ 26.12.1978ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6ಬಿ. ರಾಜ್ಯ ಮಂತ್ರಿಗಳ ನಿವಾಸಗಳು.–** (1) ಪ್ರತಿಯೊಬ್ಬ ರಾಜ್ಯ ಮಂತ್ರಿಯು [1][xxx][1] ಅವನ ಪದಾವಧಿಯಲ್ಲಿ ಮತ್ತು ನಿಕಟೋತ್ತರದ [2][ಅರವತ್ತು ದಿನಗಳ][2] ಅವಧಿಯವರೆಗೆ ಬೆಂಗಳೂರು ನಗರದಲ್ಲಿ ಸುಸಜ್ಜಿತ ನಿವಾಸವನ್ನು ಬಳಸಲು ಅಥವಾ ಅಂಥ ಸುಸಜ್ಜಿತ ನಿವಾಸಕ್ಕೆ ಬದಲಾಗಿ ಪ್ರತಿ ತಿಂಗಳಿಗೆ [6][[5][[3][ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ]][3]][5]][6] ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. [4][ಈ ಉಪಪ್ರಕರಣದ ಅಡಿಯಲ್ಲಿ ಒದಗಿಸಲಾದ ನಿವಾಸವನ್ನು ಗೊತ್ತುಪಡಿಸಬಹುದಾದದ ಅಂಥ ಪ್ರಮಾಣದಲ್ಲಿ ಸಜ್ಜುಗೊಳಿಸತಕ್ಕದ್ದು ಮತ್ತು ಅದರ ಮೇಲುಪಾಯದ ಒಟ್ಟು ವಿಸ್ತೀರ್ಣವು ಅಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ.][4]

1. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1979ರ ಅಧಿನಿಯಮ 17ರ ಮೂಲಕ ದಿನಾಂಕ 27.12.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 19ರ ಮೂಲಕ ದಿನಾಂಕ 04.03.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸುಸಜ್ಜಿತ ನಿವಾಸಕ್ಕೆ ಬದಲಾಗಿ ಮನೆ ಬಾಡಿಗೆ ಭತ್ಯೆಕ್ಕೆ ಹಕ್ಕುಳ್ಳ ರಾಜ್ಯ ಮಂತ್ರಿಯು ಬಳಸುವ ನಿವಾಸದಲ್ಲಿ, ಅಧಿಕೃತ ಉದ್ದೇಶಗಳ ಬಳಕೆಗಾಗಿ, ನಿಯಮಿಸಲಾದ ಅಂಥ ಅಳತೆಯಲ್ಲಿ ರಾಜ್ಯ ಸರ್ಕಾರವು ಮೂರು ಕೋಣೆಗಳನ್ನು ಸುಸಜ್ಜಿತಗೊಳಿಸತಕ್ಕದ್ದು. [1][ಅವರು ಪ್ರತಿ ತಿಂಗಳು, ನಿವಾಸದ ನಿರ್ವಹಣೆ ಮತ್ತು ಸ್ವಚ್ಛತೆಗಾಗಿ ಮತ್ತು ಅಂಥ ನಿವಾಸದಲ್ಲಿ ಇರುವ ತೋಟಗಳ ವಿನ್ಯಾಸ ಮತ್ತು ನಿರ್ವಹಣೆಗಾಗಿ [4][[3][[2][ಮೂವತ್ತು ಸಾವಿರ ರೂಪಾಯಿಗಳ]][2]][3]][4] ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. 1994ರ ಅಧಿನಿಯಮ 7ರ ಮೂಲಕ ದಿನಾಂಕ 01.09.1993ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ 04.03.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6ಸಿ. ರಾಜ್ಯ ಮಂತ್ರಿಗಳಿಗೆ ವಾಹನ ಸೌಲಭ್ಯ.–** (1) ರಾಜ್ಯ ಸರ್ಕಾರವು ಪ್ರತಿಯೊಬ್ಬ ರಾಜ್ಯ ಮಂತ್ರಿಯ ಬಳಕೆಗಾಗಿ ಒಂದು ಸೂಕ್ತ ಮೋಟಾರು ಕಾರನ್ನು ಒದಗಿಸಬಹುದು.

(2) ಪ್ರತಿಯೊಬ್ಬ ರಾಜ್ಯ ಮಂತ್ರಿಗೆ ಸರ್ಕಾರವು ಪ್ರತಿ ತಿಂಗಳು [4][[3][[2][ಒಂದು ಸಾವಿರದ ಐದುನೂರು ಲೀಟರ್][2]][3]][4] [1][ಪೆಟ್ರೋಲ್ ದರಗಳ ವೆಚ್ಚಕ್ಕೆ ಸಮನಾದ][1] ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

1. 1991ರ ಅಧಿನಿಯಮ 6ರ ಮೂಲಕ ದಿನಾಂಕ 1.11.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6ಡಿ. ರಾಜ್ಯ ಮಂತ್ರಿಗಳು ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ಚಾರ್ಜುಗಳು.–** (1) ಪ್ರತಿಯೊಬ್ಬ ರಾಜ್ಯ ಮಂತ್ರಿಯು, ಅವರ ಉಪಯೋಗಕ್ಕಾಗಿ 6ಬಿ ಪ್ರಕರಣದ (1)ನೇ ಉಪಪ್ರಕರಣ ಮತ್ತು 6ಸಿ ಪ್ರಕರಣದ ಅಡಿಯಲ್ಲಿ ಅವರಿಗೆ ಹಂಚಿಕೆಯಾದ ನಿವಾಸಕ್ಕೆ ಮತ್ತು ಮೋಟಾರು ಕಾರ್‌ಗೆ ಸಂಬಂಧಿಸಿದಂತೆ ಅವರುಗಳು ಈ ಮುಂದಿನ ಚಾರ್ಜುಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:–

[1][(ಎ) ಅವರಿಗೆ ಸಂಬಂಧಿಸಿದ ಮೋಟಾರು ಕಾರುಗಳಿಗೆ ಅಗತ್ಯವಾದ ಸರ್ಕಾರವು ಸಂದಾಯ ಮಾಡುವ [5][[4][[2][ಒಂದು ಸಾವಿರದ ಐದುನೂರು ಲೀಟರುಗಳಿಗಿಂತ][2]][4]][5] ಪೆಟ್ರೋಲು ವೆಚ್ಚಕ್ಕೆ ಹೆಚ್ಚುವರಿಯಾದ ಪೆಟ್ರೋಲು ವೆಚ್ಚ;][1]

[3][(ಬಿ) ವಾಸದ ಮನೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆಗಾಗಿ ಅವೆರಡರ ಒಟ್ಟು ಮಾಸಿಕ ದರದ ಮೊದಲ ಇನ್ನೂರು ರೂಪಾಯಿಗಳು.][3]

(2) 6ಬಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆ ಮತ್ತು 6ಸಿ ಪ್ರಕರಣದ ಮೇರೆಗೆ ಒದಗಿಸಿದ ಮೋಟಾರು ಕಾರು ಇವುಗಳ ದುರಸ್ತಿ ಖರ್ಚು ಸೇರಿದಂತೆ ಅವುಗಳ ನಿರ್ವಹಣೆ ಹಾಗೂ ಸುಸ್ಥಿತಿಗಾಗಿನ ಎಲ್ಲಾ ಇತರ ವೆಚ್ಚಗಳು, ಅಂಥ ಮೋಟಾರು ಕಾರುಗಳ ಚಾಲಕರು ಮತ್ತು ಕ್ಲೀನರ್‌ಗಳ ಸಂಬಳಗಳು ಮತ್ತು ಭತ್ಯೆಗಳು ಮತ್ತು ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗಳಿಗೆ ಸೇರಿದ ತೋಟಗಳ ರೂಪರೇಷೆ ಮತ್ತು ಅದರ ನಿರ್ವಹಣೆಗಾಗಿನ ಎಲ್ಲಾ ವೆಚ್ಚಗಳು, ಇವುಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.][1]

1. 1991ರ ಅಧಿನಿಯಮ 6ರ ಮೂಲಕ ದಿನಾಂಕ 1.11.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಉಪ ಮಂತ್ರಿಗಳ ಸಂಬಳಗಳು.–** ಪ್ರತಿಯೊಬ್ಬ ಉಪ ಮಂತ್ರಿಗೆ ಪ್ರತಿ ತಿಂಗಳಿಗೆ [5][[4][[1][ಐವತ್ತು ಸಾವಿರ ರೂಪಾಯಿಗಳ][1]][4]][5] ಸಂಬಳವನ್ನು ಮತ್ತು [2][ಪ್ರತಿ ವರ್ಷಕ್ಕೆ [5][[4][[1][ಎರಡು ಲಕ್ಷ ರೂಪಾಯಿಗಳ][1]][4]][5] ಆತಿಥ್ಯ ಭತ್ಯೆಯನ್ನು][2] ಸಂದಾಯ ಮಾಡತಕ್ಕದ್ದು.

1. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ 32ರ ಮೂಲಕ ದಿನಾಂಕ 26.12.1978ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2011ರ ಅಧಿನಿಯಮ 13ರ ಮೂಲಕ ದಿನಾಂಕ 1.12.2000ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**8. ಉಪ ಮಂತ್ರಿಗಳ ನಿವಾಸಗಳು.–** (1) ಪ್ರತಿಯೊಬ್ಬ ಉಪ ಮಂತ್ರಿಯು [1][xxx][1] ಅವನ ಪದಾವಧಿಯಲ್ಲಿ ಮತ್ತು ನಿಕಟೋತ್ತರದ [2][ಅರವತ್ತು ದಿನಗಳ][2] ಅವಧಿಯವರೆಗೆ ಬೆಂಗಳೂರು ನಗರದಲ್ಲಿ ಸುಸಜ್ಜಿತ ನಿವಾಸವನ್ನು ಬಳಸಲು ಅಥವಾ ಅಂಥ ಸುಸಜ್ಜಿತ ನಿವಾಸಕ್ಕೆ ಬದಲಾಗಿ ಪ್ರತಿ ತಿಂಗಳಿಗೆ [6][[5][[3][ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ][3]][5]][6] ದರದಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು. [4][ಈ ಉಪಪ್ರಕರಣದ ಅಡಿಯಲ್ಲಿ ಒದಗಿಸಲಾದ ನಿವಾಸವನ್ನು ಗೊತ್ತುಪಡಿಸಬಹುದಾದದ ಅಂಥ ಪ್ರಮಾಣದಲ್ಲಿ ಸಜ್ಜುಗೊಳಿಸತಕ್ಕದ್ದು ಮತ್ತು ಅದರ ಮೇಲುಪಾಯದ ಒಟ್ಟು ವಿಸ್ತೀರ್ಣವು ಅಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ.][4]

1. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1979ರ ಅಧಿನಿಯಮ 17ರ ಮೂಲಕ ದಿನಾಂಕ 27.12.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 19ರ ಮೂಲಕ ದಿನಾಂಕ.04.03.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸುಸಜ್ಜಿತ ನಿವಾಸಕ್ಕೆ ಬದಲಾಗಿ ಮನೆ ಬಾಡಿಗೆ ಭತ್ಯೆಕ್ಕೆ ಹಕ್ಕುಳ್ಳ ರಾಜ್ಯ ಮಂತ್ರಿಗಳು ಬಳಸುವ ನಿವಾಸದಲ್ಲಿ, ಅಧಿಕೃತ ಉದ್ದೇಶಗಳ ಬಳಕೆಗಾಗಿ, ನಿಯಮಿಸಲಾದ ಅಂಥ ಅಳತೆಯಲ್ಲಿ ರಾಜ್ಯ ಸರ್ಕಾರವು ಮೂರು ಕೋಣೆಗಳನ್ನು ಸುಸಜ್ಜಿತಗೊಳಿಸತಕ್ಕದ್ದು. [1][ಅವರು ಪ್ರತಿ ತಿಂಗಳು, ನಿವಾಸದ ನಿರ್ವಹಣೆ ಮತ್ತು ಸ್ವಚ್ಛತೆಗಾಗಿ ಮತ್ತು ಅಂಥ ನಿವಾಸದಲ್ಲಿ ಇರುವ ತೋಟಗಳ ವಿನ್ಯಾಸ ಮತ್ತು ನಿರ್ವಹಣೆಗಾಗಿ [4][[3][[2][ಮೂವತ್ತು ಸಾವಿರ ರೂಪಾಯಿಗಳ][2]][3]][4] ಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. 1994ರ ಅಧಿನಿಯಮ 7ರ ಮೂಲಕ ದಿನಾಂಕ 1.9.1993ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2015ರ ಅಧಿನಿಯಮ 19ರ ಮೂಲಕ ದಿನಾಂಕ 04.03.2014ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**9. ಉಪಮಂತ್ರಿಗಳಿಗೆ ವಾಹನ ಸೌಲಭ್ಯ.–** (1) ರಾಜ್ಯ ಸರ್ಕಾರವು ಪ್ರತಿಯೊಬ್ಬ ಉಪ ಮಂತ್ರಿಯ ಬಳಕೆಗಾಗಿ ಒಂದು ಸೂಕ್ತ ಮೋಟಾರು ಕಾರನ್ನು ಒದಗಿಸಬಹುದು.

(2) ಪ್ರತಿಯೊಬ್ಬ ರಾಜ್ಯ ಮಂತ್ರಿಗೆ ಸರ್ಕಾರವು [4][[3][ಪ್ರತಿ ತಿಂಗಳು [5][ಒಂದು ಸಾವಿರದ ಐದುನೂರು ಲೀಟರ್][5] ಪೆಟ್ರೋಲ್][3]][4] [2][ದರಗಳ ವೆಚ್ಚಕ್ಕೆ ಸಮನಾದ][2] ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.][1]

1. 1967ರ ಅಧಿನಿಯಮ 9ರ ಮೂಲಕ ದಿನಾಂಕ 10.08.1967ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1991ರ ಅಧಿನಿಯಮ 6ರ ಮೂಲಕ ದಿನಾಂಕ 01.11.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 19ರ ಮೂಲಕ ದಿನಾಂಕ 13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**9ಎ. ಮಂತ್ರಿಗಳಿಂದ ಹೆಲಿಕಾಪ್ಟರ್ ಮತ್ತು ಏರ್‌ಕ್ರಾಫ್ಟ್‌ನ ಬಳಕೆ.–** ಪ್ರತಿಯೊಬ್ಬ ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಯು, ಲಭ್ಯತೆಗೆ ಒಳಪಟ್ಟು, ಅಧಿಕೃತ ಉದ್ದೇಶಗಳಿಗಾಗಿ, ಉಚಿತ ದರಗಳಲ್ಲಿ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಹೆಲಿಕಾಪ್ಟರ್ ಅಥವಾ ಏರ್‌ಕ್ರಾಫ್ಟ್ ಅನ್ನು ಬಳಸಲು ಅರ್ಹನಾಗಿರತಕ್ಕದ್ದು.][1]

1. 1984ರ ಅಧಿನಿಯಮ 14ರ ಮೂಲಕ ದಿನಾಂಕ 01.11.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**9ಬಿ. ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳಲ್ಲಿ ಹೆಚ್ಚಳ.–** ಮುಖ್ಯಮಂತ್ರಿ, ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ಆದಾಯ ತೆರಿಗೆ ಅಧಿನಿಯಮ, 1961ರ 48ನೇ ಪ್ರಕರಣದ ವಿವರಣೆಯ ಖಂಡ (V)ರ ಅಡಿಯಲ್ಲಿ ಉಪಬಂಧಿಸಲಾದ ಬೆಲೆ ಏರಿಕೆ ಸೂಚ್ಯಂಕದ ಆಧಾರದ ಮೇಲೆ 2023ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗಿ ಪ್ರತಿ ಐದು ವರ್ಷಗಳ ತರುವಾಯ ಹೆಚ್ಚಳ ಮಾಡತಕ್ಕದ್ದು.][1]

1. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**10. ಉಪಮಂತ್ರಿಗಳು ಮತ್ತು ಸರ್ಕಾರವು ಸಂದಾಯ ಮಾಡಬೇಕಾದ ಚಾರ್ಜುಗಳು.–** (1) ಪ್ರತಿಯೊಬ್ಬ ಉಪ ಮಂತ್ರಿಯು, ಅವರ ಉಪಯೋಗಕ್ಕಾಗಿ 8ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು 9ನೇ ಪ್ರಕರಣದ ಅಡಿಯಲ್ಲಿ ಅವರಿಗೆ ಹಂಚಿಕೆಯಾದ ನಿವಾಸಕ್ಕೆ ಮತ್ತು ಮೋಟಾರು ಕಾರ್‌ಗೆ ಸಂಬಂಧಿಸಿದಂತೆ ಅವರುಗಳು ಈ ಮುಂದಿನ ಚಾರ್ಜುಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:–

[2][(ಎ) ಅವರಿಗೆ ಸಂಬಂಧಿಸಿದ ಮೋಟಾರು ಕಾರುಗಳಿಗೆ ಅಗತ್ಯವಾದ ಸರ್ಕಾರವು ಸಂದಾಯ ಮಾಡುವ [6][[5][[3][ಒಂದು ಸಾವಿರದ ಐದುನೂರು ಲೀಟರುಗಳ][3]][5]][6] ಪೆಟ್ರೋಲು ವೆಚ್ಚಕ್ಕೆ ಹೆಚ್ಚುವರಿಯಾದ ಪೆಟ್ರೋಲು ವೆಚ್ಚ;][2]

[4][(ಬಿ) ವಾಸದ ಮನೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆಗಾಗಿ ಅವೆರಡರ ಒಟ್ಟು ಮಾಸಿಕ ದರದ ಮೊದಲ ಇನ್ನೂರು ರೂಪಾಯಿಗಳು.][4]

(2) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆ ಮತ್ತು 9ನೇ ಪ್ರಕರಣದ ಮೇರೆಗೆ ಒದಗಿಸಿದ ಮೋಟಾರು ಕಾರು ಇವುಗಳ ದುರಸ್ತಿ ಖರ್ಚು ಸೇರಿದಂತೆ ಅವುಗಳ ನಿರ್ವಹಣೆ ಹಾಗೂ ಸುಸ್ಥಿತಿಗಾಗಿನ ಎಲ್ಲಾ ಇತರ ವೆಚ್ಚಗಳು, ಅಂಥ ಮೋಟಾರು ಕಾರುಗಳ ಚಾಲಕರು ಮತ್ತು ಕ್ಲೀನರ್‌ಗಳ ಸಂಬಳಗಳು ಮತ್ತು ಭತ್ಯೆಗಳು ಮತ್ತು ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗಳಿಗೆ ಸೇರಿದ ತೋಟಗಳ ರೂಪರೇಷೆ ಮತ್ತು ಅದರ ನಿರ್ವಹಣೆಗಾಗಿನ ಎಲ್ಲಾ ವೆಚ್ಚಗಳು, ಇವುಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.][1]

1. 1967ರ ಅಧಿನಿಯಮ 9ರ ಮೂಲಕ ದಿನಾಂಕ 10.8.1967ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1991ರ ಅಧಿನಿಯಮ 6ರ ಮೂಲಕ ದಿನಾಂಕ 1.11.1990ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 19ರ ಮೂಲಕ ದಿನಾಂಕ.13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**10ಎ. ಇತರ ಕೆಲವು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ಭರಿಸಬೇಕಾದ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆ ದರಗಳು.–** (1) ಸುಸಜ್ಜಿತ ನಿವಾಸದ ಸೌಲಭ್ಯವನ್ನು ಪಡೆದುಕೊಂಡಿಲ್ಲದ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಗಳ ನಿವಾಸದ

ಸಂಬಂಧದಲ್ಲಿ, ಆತನ ನಿವಾಸದಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಿನ ಒಟ್ಟು ಬಳಕೆಗಾಗಿ ಪ್ರತಿ ತಿಂಗಳು ಮೊದಲ ಎರಡು ನೂರು ರೂಪಾಯಿಗಳಿಗಿಂತ ಹೆಚ್ಚಿನ ಮಾಸಿಕ ಚಾರ್ಜುಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

1. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ 10ಎ ಮತ್ತು 10ಬಿ ಪ್ರಕರಣಗಳನ್ನು ಸೇರಿಸಲಾಗಿದೆ.

**10ಬಿ. ಮನೆ ಬಾಡಿಗೆ ಮುಂತಾದುವುಗಳ ಸಂಬಂಧದಲ್ಲಿ ಕಡಿತಗಳು.–** ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಗೆ ಸಂದಾಯ ಮಾಡಬೇಕಾದ ಸಂಬಳದಿಂದ ಪ್ರತಿ ತಿಂಗಳು,–

(ಎ) ರಾಜ್ಯ ಸರ್ಕಾರವು ಒದಗಿಸಿದ ನಿವಾಸದಲ್ಲಿ ವಾಸವಾಗಿದ್ದರೆ, ಮನೆ ಬಾಡಿಗೆಯಾಗಿ ಆತನ ಸಂಬಳದ ಶೇಕಡಾ ಹತ್ತಕ್ಕೆ ಸಮನಾದ ಮೊತ್ತ;

(ಬಿ) ರಾಜ್ಯ ಸರ್ಕಾರವು ಆತನ ನಿವಾಸವನ್ನು ಸುಸಜ್ಜಿತಗೊಳಿಸಿದ್ದರೆ, ಅದನ್ನು ಸುಸಜ್ಜಿತಗೊಳಿಸಿದ ಬಾಡಿಗೆಯಾಗಿ ಆತನ ಸಂಬಳದ ಶೇಕಡಾ ಎರಡೂವರೆಗೆ ಸಮನದಾದ ಮೊತ್ತ,

–ಇವುಗಳನ್ನು ಕಡಿತಗೊಳಿಸತಕ್ಕದ್ದು.][1]

1. 1978ರ ಅಧಿನಿಯಮ 32ರ ಮೂಲಕ ದಿನಾಂಕ 23.03.1972ರಿಂದ 10ಎ ಮತ್ತು 10ಬಿ ಪ್ರಕರಣಗಳನ್ನು ಸೇರಿಸಲಾಗಿದೆ.

**11. [1][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು][1] ಅಧಿಕಾರ ವಹಿಸಿಕೊಂಡ ಮೇಲೆ ಅಥವಾ ಅಧಿಕಾರ ತ್ಯಜಿಸಿದ ಮೇಲೆ ಪಡೆಯುವ ಪ್ರಯಾಣ ಭತ್ಯೆಗಳು.–** [1][(1) ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು,–][1]

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ರಾಜ್ಯದಲ್ಲಿನ ತಮ್ಮ ಸಾಮಾನ್ಯ ವಾಸಸ್ಥಳದಿಂದ, ಅದು ಸದರಿ ನಗರದ ಹೊರಗಡೆ ಇದ್ದರೆ, ಬೆಂಗಳೂರು ನಗರದಲ್ಲಿ ಅಧಿಕಾರ ವಹಿಸಿಕೊಳ್ಳುವ ಸಂಬಂಧದಲ್ಲಿನ ಪ್ರಯಾಣಕ್ಕಾಗಿ; ಮತ್ತು

(ಬಿ) ಅವರು ಅಧಿಕಾರವನ್ನು ವಹಿಸಿಕೊಳ್ಳುವ ಮೊದಲು ರಾಜ್ಯದಲ್ಲಿನ ಅವರ ಸಾಮಾನ್ಯ ವಾಸಸ್ಥಳಕ್ಕೆ ಅಂಥ ಸ್ಥಳವು ಸದರಿ ನಗರದ ಹೊರಗಡೆ ಇದ್ದರೆ ಬೆಂಗಳೂರು ನಗರದಲ್ಲಿ ಅಧಿಕಾರ ತ್ಯಜಿಸಿದ ಸಂಬಂಧದ ಪ್ರಯಾಣಕ್ಕಾಗಿ,

–ತಮಗೆ ಮತ್ತು ತಮ್ಮ ಕುಟುಂಬದ ಸದಸ್ಯರುಗಳ ಹಾಗೂ ವೈಯಕ್ತಿಕ ಸಾಮಾನುಗಳನ್ನು ಸಾಗಿಸುವುದಕ್ಕೆ ಈ ಮುಂದೆ ನಿರ್ದಿಷ್ಟಪಡಿಸಿದ ದರಗಳಲ್ಲಿ ಪ್ರಯಾಣ ಭತ್ಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು, ಎಂದರೆ,–

(i) ಪ್ರಯಾಣವನ್ನು ರೈಲಿನಲ್ಲಿ ಮಾಡಿರಲಿ ಅಥವಾ ರಸ್ತೆಯ ಮೂಲಕ ಮಾಡಿರಲಿ ಅಥವಾ ಅವೆರಡರ ಮೂಲಕ ಮಾಡಿರಲಿ, [1][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು,][1] ತಮಗಾಗಿ ಮತ್ತು ತಮ್ಮ ಕುಟುಂಬದ ಸದಸ್ಯರಿಗಾಗಿ ಮಾಡಿದ ವಾಸ್ತವಿಕ ವೆಚ್ಚಗಳು;

(ii) ರಸ್ತೆ ಮೂಲಕವಾಗಿರಲಿ ಅಥವಾ ರೈಲು ಮೂಲಕವೇ ಆಗಿರಲಿ ವೈಯಕ್ತಿಕ ಸಾಮಾನುಗಳ ಸಾಗಾಣಿಕೆಗಾಗಿ ಮಾಡಿದ ವಾಸ್ತವಿಕ ವೆಚ್ಚಗಳು; ಪರಂತು, ಅಂಥ ಸಾಗಾಣಿಕೆಗಾಗಿ ರೈಲು ವ್ಯಾಗನನ್ನು ಮೀಸಲಿರಿಸಿದ್ದರೆ, ಅಂಥ ವ್ಯಾಗನ್ನಿಗಾಗಿ ವಹಿಸಿದ ವೆಚ್ಚಗಳು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ "ಕುಟುಂಬದ ಸದಸ್ಯರು" ಎಂದರೆ, ಸಂದರ್ಭಾನುಸಾರ [1][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಯನ್ನು][1] ಪೂರ್ಣವಾಗಿ ಅವಲಂಭಿಸಿರುವ ಮತ್ತು ಅವರೊಡನೆ ವಾಸಿಸುತ್ತಿರುವ ಗಂಡ, ಹೆಂಡತಿ, ಮಗ, ಮಗಳು, ತಂದೆ ತಾಯಿ, ಸಹೋದರ ಅಥವಾ ಸಹೋದರಿ.

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**12. ಪ್ರವಾಸದ ಮೇಲಿರುವಾಗ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳು.–** (1) [1][ಪ್ರತಿಯೊಬ್ಬ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಯು][1] ತಮ್ಮ ಅಧಿಕಾರ ಸ್ಥಾನಗಳಿಗೆ ಸಂಬಂಧಿಸಿದ ಕರ್ತವ್ಯಗಳ ಮೇಲೆ ಪ್ರವಾಸ ಮಾಡುವಾಗ, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳು ಮತ್ತು ಷರತ್ತುಗಳ ಅನುಸಾರ ಪ್ರಯಾಣ ಮತ್ತು ದೈನಂದಿನ ಭತ್ಯೆ ಅಥವಾ ಇತರ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

(2) [1][ಪ್ರತಿಯೊಬ್ಬ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಯು][1] ತಮ್ಮ ಅಧಿಕೃತ ವ್ಯವಹಾರದ ಮೇಲೆ ಪ್ರವಾಸದಲ್ಲಿರುವಾಗ,–

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ರೈಲಿನ ಮೂಲಕ ಮಾಡಲಾದ ಪ್ರಯಾಣಗಳಿಗಾಗಿ ಆ ರೈಲಿನಲ್ಲಿ ಲಭ್ಯವಿರುವ ಉತ್ತಮ ದರ್ಜೆಯ ಒಂದು ಪ್ರಯಾಣ ದರದ [1][ಎರಡರಷ್ಟಕ್ಕೆ][1] ಹಕ್ಕುಳ್ಳವರಾಗಿರತಕ್ಕದ್ದು;

ಪರಂತು, [2][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು][2] ತಮ್ಮ ಪ್ರಯಾಣಕ್ಕೆ ಒಂದು ಬೋಗಿಯನ್ನು ಮೀಸಲಿರಿಸಿಕೊಂಡಿದ್ದರೆ ಅಂಥ ಬೋಗಿಯ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

ಮತ್ತೂ ಪರಂತು, [2][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಯ][2] ಜೊತೆಯಲ್ಲಿ ಯಾರೇ ವ್ಯಕ್ತಿ ಮೀಸಲಿರಿಸಿದ ಬೋಗಿಯಲ್ಲಿ ಪ್ರಯಾಣ ಮಾಡಿದರೆ ಅಂಥ ವ್ಯಕ್ತಿಯ ಸಂಬಂಧದ ವೆಚ್ಚಗಳನ್ನು ವಸೂಲು ಮಾಡತಕ್ಕದ್ದು ಮತ್ತು ಸರ್ಕಾರಕ್ಕೆ ಜಮೆ ಮಾಡತಕ್ಕದ್ದು.

1. 1974ರ ಅಧಿನಿಯಮ 18ರ ಮೂಲಕ ದಿನಾಂಕ 27.05.1974ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ರಸ್ತೆಯ ಮೂಲಕ ಪ್ರಯಾಣ ಮಾಡಿದಾಗ [1][ಪ್ರತಿ ಕಿಲೋಮೀಟರಿಗೆ [4][[3][[2][ನಲವತ್ತು ರೂಪಾಯಿ]][1]][2]][3]][4] ರಸ್ತೆ ಮೈಲು ದರಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

1. 1967ರ ಅಧಿನಿಯಮ 9ರ ಮೂಲಕ ದಿನಾಂಕ 10.8.1967ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ.13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ವಿಮಾನದ ಮೂಲಕ ಮಾಡುವ ಪ್ರಯಾಣಕ್ಕಾಗಿ, ಅಂಥ ಪ್ರಯಾಣಕ್ಕೆ ಸಂದಾಯ ಮಾಡಿದ ಒಂದು ದರದ ಮತ್ತು ಒಂದು ಐದನೇ ಒಂದು ಭಾಗದಷ್ಟು ಮತ್ತು [1][ಅಂಥ ಪ್ರಯಾಣಗಳ ಸಂದರ್ಭದಲ್ಲಿ ಅಪಘಾತಗಳು ಉಂಟಾದಲ್ಲಿ ವಿಮೆಗಾಗಿ ನಿಗದಿಪಡಿಸಿದ ವಿಮಾಕಂತು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು;][1]

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 1.11.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಿ) ಪ್ರಯಾಣದ ದಿನಗಳಿಗಾಗಿ ಮತ್ತು ಯಾವುದೇ ಸ್ಥಳದಲ್ಲಿ ಉಳಿದುಕೊಳ್ಳುವ ಪ್ರತಿದಿನಕ್ಕೆ [5][[3][[1][ಎರಡು ಸಾವಿರದ ಐದುನೂರು ರೂಪಾಯಿಗಳ]][3]][1]][5] ದಿನಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, ರಾಜ್ಯದ ಹೊರಗೆ ಮಾಡುವ ಪ್ರವಾಸಗಳ ಸಂದರ್ಭಗಳಲ್ಲಿ ಪ್ರಯಾಣದ ದಿನಗಳಿಗೆ ಮತ್ತು ಯಾವುದೇ ಸ್ಥಳದಲ್ಲಿ ಉಳಿದುಕೊಳ್ಳುವ ಪ್ರತಿ ದಿನಕ್ಕೆ [5][[3][[1][ಮೂರು ಸಾವಿರ ರೂಪಾಯಿಗಳು]][3]][1]][5] ದಿನಭತ್ಯೆಯಾಗಿರತಕ್ಕದ್ದು:

ಮತ್ತೂ ಪರಂತು, [2][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳನ್ನು][2] ರಾಜ್ಯದ ಅತಿಥಿಗಳೆಂದು ಪರಿಗಣಿಸಿದ ಸಂದರ್ಭಗಳಲ್ಲಿ, ಅವರನ್ನು ರಾಜ್ಯದ ಅತಿಥಿ ಎಂದು ಪರಿಗಣಿಸಿದಂಥ ಅವಧಿಗಾಗಿ ದಿನಭತ್ಯದ ಕಾಲುಭಾಗದಷ್ಟು ಹಣವನ್ನು ಮಾತ್ರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು:

[4][ಅಲ್ಲದೇ ಪರಂತು, ರಾಜ್ಯದ ಹೊರಗಿನ ಪ್ರವಾಸದ ಸಂದರ್ಭದಲ್ಲಿ, ಆತನು ಅನುಸೂಚಿತ ದರಗಳಲ್ಲಿ ಊಟ ಮತ್ತು ವಸತಿಯನ್ನು ಒದಗಿಸುವ ಹೋಟೆಲ್ ಅಥವಾ ನೊಂದಾಯಿತ ಸಂಸ್ಥೆಯಲ್ಲಿ ಉಳಿದುಕೊಂಡಿದ್ದಲ್ಲಿ, ಆತನು ಬಿಲ್ಲುಗಳನ್ನು ಒದಗಿಸುವುದಕ್ಕೆ ಒಳಪಟ್ಟು ಒಂದು ದಿನಕ್ಕೆ [5][ಏಳು ಸಾವಿರ ರೂಪಾಯಿಗಳ][5] ದಿನಭತ್ಯೆಗೆ ಅರ್ಹನಾಗಿರತಕ್ಕದ್ದು.][4]

1. 2011ರ ಅಧಿನಿಯಮ 33ರ ಮೂಲಕ ದಿನಾಂಕ 04.07.2011ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 19ರ ಮೂಲಕ ದಿನಾಂಕ.13.04.2015ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 19ರ ಮೂಲಕ ದಿನಾಂಕ.13.04.2015ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2022ರ ಅಧಿನಿಯಮ ಸಂಖ್ಯೆ 13ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2ಎ) ಪ್ರತಿಯೊಬ್ಬ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಯು ಕರ್ತವ್ಯದ ಮೇಲೆ ಭಾರತದ ಹೊರಗೆ ಪ್ರಯಾಣಿಸುತ್ತಿದ್ದರೆ ಅಥವಾ ವೈದ್ಯಕೀಯ ಚಿಕಿತ್ಸೆಗಾಗಿ ಭಾರತದ ಹೊರಗೆ ಪ್ರಯಾಣಿಸುತ್ತಿದ್ದರೆ, ಅವರು ಪ್ರಯಾಣ ಮತ್ತು ಇತರ ವೆಚ್ಚಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಮಂತ್ರಿಗಳಂತೆಯೇ ಅದೇ ಷರತ್ತುಗಳು ಮತ್ತು ನಿಬಂಧನೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. 1987ರ ಅಧಿನಿಯಮ 18ರ ಮೂಲಕ ದಿನಾಂಕ 01.04.1987ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2ಬಿ) ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು ಸಾರ್ವಜನಿಕ ಹಿತಾಸಕ್ತಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಮೋಟಾರು ಕಾರಿನಲ್ಲಿ ರಸ್ತೆಯ ಮೂಲಕ ಪ್ರಯಾಣ ಮಾಡುತ್ತಿರುವಾಗ ಮುಂದಿನ ಪ್ರಯಾಣವನ್ನು ರೈಲು ಅಥವಾ ವಿಮಾನದ ಮೂಲಕ ಕೈಗೊಳ್ಳಬೇಕಾದರೆ ಅವರು ಮೋಟಾರು ಕಾರಿನ ಬಳಕೆಯನ್ನು ನಿಲ್ಲಿಸಿದ ಸ್ಥಳದಿಂದ ಬೆಂಗಳೂರು ನಗರಕ್ಕೆ ಮೋಟಾರು ಕಾರು ವಾಪಸ್ಸು ಬರಲು ಬಳಸಿದ ಪೆಟ್ರೋಲ್ ವೆಚ್ಚವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು:

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 01.01.1966ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2ಸಿ) ಪ್ರತಿಯೊಬ್ಬ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಯು (2)ನೇ ಉಪಪ್ರಕರಣದ ಮೇರೆಗೆ ಪಡೆಯುವ ಭತ್ಯೆಗಳ ಜೊತೆಗೆ, [2][ನವದೆಹಲಿಯ ಕರ್ನಾಟಕ ಭವನದಲ್ಲಿ][2] ರಾಜ್ಯ ಸರ್ಕಾರವು ನಿರ್ವಹಿಸಿಕೊಂಡು ಬರುತ್ತಿರುವ ಮೋಟಾರು ಕಾರುಗಳನ್ನು ವೆಚ್ಚ ಸಂದಾಯ ಮಾಡದೇ ಬಳಸಲು ಹಕ್ಕುಳ್ಳವರಾಗಿರತಕ್ಕದ್ದು.][1]

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 01.01.1966ರಿಂದ 2ಎ ಮತ್ತು 2ಬಿ ಉಪಪ್ರಕರಣವನ್ನು ಸೇರಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][ಪರಂತು, ಬಳಕೆಗಾಗಿ ಅಂಥ ಯಾವುದೇ ಕಾರು ಲಭ್ಯವಿಲ್ಲದಿದ್ದಲ್ಲಿ ಮತ್ತು ತನ್ನ ಅಧಿಕೃತ ವ್ಯವಹಾರದ ಸಂಬಂಧದಲ್ಲಿನ ಪ್ರಯಾಣಕ್ಕಾಗಿ ಆತನು ಮೋಟಾರು ಕಾರನ್ನು ಬಾಡಿಗೆ ಪಡೆದಿದ್ದಲ್ಲಿ ಆತನು ಸಂದಾಯ ಮಾಡಿದ ವಾಸ್ತವಿಕ ಬಾಡಿಗೆ ದರಗಳನ್ನು ಮರುವಸೂಲು ಮಾಡಲು ಆತನು ಅರ್ಹನಾಗಿರತಕ್ಕದ್ದು.][1]

1. 1984ರ ಅಧಿನಿಯಮ 14ರ ಮೂಲಕ ದಿನಾಂಕ 01.01.1966ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಸುಲಭವಾಗಿ ತಲುಪಲಾಗದ ರಾಜ್ಯದೊಳಗಿನ ನಿಯಮಿಸಲಾದ ಸ್ಥಳಗಳಲ್ಲಿ [1][ಮಂತ್ರಿಗಳು, ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳು][1] ಕೈಗೊಂಡ ಪ್ರಯಾಣಗಳಿಗಾಗಿ ಸೂಕ್ತವಾದ ಮೋಟಾರು ಕಾರುಗಳನ್ನು ರಾಜ್ಯ ಸರ್ಕಾರವು ನಿರ್ವಹಿಸಬಹುದು, ಮತ್ತು ಅಂಥ ಮೋಟಾರು ಕಾರುಗಳನ್ನು ಯಾವೊಬ್ಬ [1][ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು][1] ಪ್ರಯಾಣಕ್ಕಾಗಿ ಬಳಸಿದ್ದರೆ, ಆಗ, (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಆತನು ದೈನಂದಿನ ಭತ್ಯೆಯನ್ನು ಹೊರತುಪಡಿಸಿ, ಯಾವುದೇ ಭತ್ಯೆಗೆ ಅರ್ಹನಾಗತಕ್ಕದ್ದಲ್ಲ.

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(4) ರಾಜ್ಯ ಸರ್ಕಾರವು ಆತನಿಗೆ ಒದಗಿಸಿದ ಮೋಟಾರು ಕಾರು, ರಸ್ತೆಯ ಮೂಲಕದ ಪ್ರಯಾಣ ಮಾಡುವಾಗ ದುರಸ್ತಿಗೆ ಈಡಾಗಿದ್ದು ಮತ್ತು ತನ್ನ ಅಧಿಕೃತ ವ್ಯವಹಾರಕ್ಕೆ ಸಂಬಂಧಿಸಿದ ಪ್ರಯಾಣಗಳಿಗಾಗಿ ಮಂತ್ರಿ, ರಾಜ್ಯಮಂತ್ರಿ ಅಥವಾ ಉಪಮಂತ್ರಿಗಳು ಮೋಟಾರು ಕಾರನ್ನು ಬಾಡಿಗೆ ಪಡೆದಿದ್ದರೆ, ಆತನು ವಾಸ್ತವಿಕವಾಗಿ ಸಂದಾಯ ಮಾಡಿದ ಬಾಡಿಗೆ ವೆಚ್ಚಗಳನ್ನು ಮರುವಸೂಲು ಮಾಡಲು ಅರ್ಹನಾಗಿರತಕ್ಕದ್ದು.][1]

1. 1984ರ ಅಧಿನಿಯಮ 14ರ ಮೂಲಕ ದಿನಾಂಕ 01.01.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**12ಎ. XXX**][1]

1. 1979ರ ಅಧಿನಿಯಮ 17ರ ಮೂಲಕ ದಿನಾಂಕ 26.12.1978ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

**13. ವೈದ್ಯಕೀಯ ಶುಶ್ರೂಷೆ.–** ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು, [1][ಒಬ್ಬ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಯು][1] ಮತ್ತು ಇವರೊಂದಿಗೆ ವಾಸಿಸುವ ಮತ್ತು ಅವರನ್ನು ಅವಲಂಬಿಸಿದ ಮಂತ್ರಿ, ರಾಜ್ಯಮಂತ್ರಿ ಮತ್ತು ಉಪಮಂತ್ರಿಯ ಕುಟುಂಬದ ಸದಸ್ಯರು, ರಾಜ್ಯ ಸರ್ಕಾರವು ನಿರ್ವಹಿಸುವ ಆಸ್ಪತ್ರೆಯಲ್ಲಿ ಕೊಠಡಿ ಮತ್ತು ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. [2][ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು [3][ಭಾರತದಲ್ಲಾಗಲಿ ಅಥವಾ ಹೊರಗಡೆಯಾಗಲಿ][3] ಇತರ ಯಾವುದೇ ಸ್ಥಳದಲ್ಲಿ ಪಡೆದುಕೊಂಡ ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಾಗಿ ಅವರು ಖರ್ಚು ಮಾಡಿದ ವೆಚ್ಚಗಳಿಗೆ ಸರ್ಕಾರದಿಂದ ಹಣದ ಮರು ಭರ್ತಿ ಹೊಂದಲು ಸಹ ಅವರು ಹಕ್ಕುಳ್ಳವರಾಗಿರತಕ್ಕದ್ದು.][2]

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ ಕುಟುಂಬದ ಸದಸ್ಯರು ಎಂದರೆ ಗಂಡ, ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ ಅಥವಾ ಸಹೋದರಿ.

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1974ರ ಅಧಿನಿಯಮ 18ರ ಮೂಲಕ ದಿನಾಂಕ 27.05.1974ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1979ರ ಅಧಿನಿಯಮ 17ರ ಮೂಲಕ ದಿನಾಂಕ 26.12.1978ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**14. [1][ಮಂತ್ರಿಗಳು, ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳು][1] ವೃತ್ತಿ ಮುಂತಾದುವುಗಳನ್ನು ನಡೆಸುವಂತಿಲ್ಲ.–** [1][ಮಂತ್ರಿಗಳು, ರಾಜ್ಯಮಂತ್ರಿಗಳು ಮತ್ತು ಉಪಮಂತ್ರಿಗಳು][1] ತಮ್ಮ ಅಧಿಕಾರದ ಅವಧಿಯಲ್ಲಿ, ಯಾವುದೇ ವೃತ್ತಿಯನ್ನು ನಡೆಸತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರದಲ್ಲಿ ನಿರತರಾಗತಕ್ಕದ್ದಲ್ಲ ಅಥವಾ [1][ಮಂತ್ರಿಗಳು, ರಾಜ್ಯಮಂತ್ರಿಗಳು ಸಂದರ್ಭಾನುಸಾರವಾಗಿ ಉಪಮಂತ್ರಿಗಳಾಗಿ][1] ತಮ್ಮ ಕರ್ತವ್ಯಗಳನ್ನು ಹೊರತುಪಡಿಸಿ ಪರಿಶ್ರಮ ಧನಕ್ಕಾಗಿ ಯಾವುದೇ ಉದ್ಯೋಗವನ್ನು ಕೈಗೊಳ್ಳತಕ್ಕದ್ದಲ್ಲ.

1. 1968ರ ಅಧಿನಿಯಮ 17ರ ಮೂಲಕ ದಿನಾಂಕ 11.10.1968ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**15. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, [1][ಕರ್ನಾಟಕ ರಾಜ್ಯಪತ್ರದಲ್ಲಿ][1] ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶವನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

[2][(1ಎ) ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರಚಿಸಬಹುದು ಮತ್ತು ಯಾವುದೇ ಅಂಥ ನಿಯಮವನ್ನು ರಚಿಸಿದ್ದರೆ, ಅಂಥ ನಿಯಮದ ರಚನೆಗೆ ಉಂಟಾದ ಕಾರಣಗಳನ್ನು ನಿರ್ದಿಷ್ಟಪಡಿಸುವ ಒಂದು ವಿವರಣೆಯನ್ನು (2)ನೇ ಉಪ–ಪ್ರಕರಣದ ಮೇರೆಗಿನ ನಿಯಮದೊಂದಿಗೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.][2]

(2) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಯಾವುದೇ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ರಚಿಸತಕ್ಕದ್ದಲ್ಲ ಎಂದು ಒಪ್ಪಿದರೆ ಆ ನಿಯಮಗಳು ಆ ತರುವಾಯ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮ ಹೊಂದಿರತಕ್ಕದ್ದು ಅಥವಾ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಸದರಿ ನಿಯಮದ ಮೇರೆಗೆ ಈ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1968ರ ಅಧಿನಿಯಮ 17ರ ಮೂಲಕ ದಿನಾಂಕ 01.11.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**16. 1956ರ [1][ಕರ್ನಾಟಕ][1] ಅಧ್ಯಾದೇಶ ಸಂಖ್ಯೆ 2ರ ನಿರಸನ ಮತ್ತು ಉಳಿಸುವಿಕೆಗಳು.–** [1][ಕರ್ನಾಟಕ][1] ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧ್ಯಾದೇಶ, 1956ನ್ನು ಈ ಮೂಲಕ ನಿರಸನಗೊಳಿಸಲಾಗಿದೆ. ಆದರೆ, ಸದರಿ ಅಧ್ಯಾದೇಶದ ಮೇರೆಗೆ ರಚಿಸಿದ ಯಾವುದೇ ನಿಯಮಗಳು, ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು 1956ರ ನವೆಂಬರ್ ಮೊದಲನೇ ದಿವಸದಂದು ಈ ಅಧಿನಿಯಮವು ಜಾರಿಗೆ ಬಂದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗೆ ರಚಿಸಲಾಗಿದೆ, ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸದರಿ ಅಧ್ಯಾದೇಶದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ಈ ಅಧಿನಿಯಮವನ್ನು ಅಂಗೀಕರಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಒಂದು ತಿಂಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ರಾಜ್ಯ ವಿಧಾನ ಮಂಡಲದ ಯಾವುದೇ ಸದನವು ಈ ನಿಯಮಗಳಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ನಿಯಮವು ಪರಿಣಾಮ ಹೊಂದಿರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟು ಅಥವಾ ನಿರ್ದೇಶನಕ್ಕೆ ಇನ್ನೊಂದು ಸದನವು ಒಪ್ಪಿದರೆ, ಆ ತರುವಾಯ, ಆ ನಿಯಮಗಳು ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**************

The above translation of the Karnataka Ministers Salaries and Allowanes Act, 1956 (Karnataka Act 5 of 1957) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**THAAWARCHAND GEHLOT**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

**2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 13**
(2022 ರ ಮಾರ್ಚ್ ತಿಂಗಳ 11ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2022**
(2022 ರ ಮಾರ್ಚ್ ತಿಂಗಳ 10ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು (1957ರ ಕರ್ನಾಟಕ ಅಧಿನಿಯಮ 5) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 2022ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ**.- ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 5) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದಲ್ಲಿ,-

(i) "ಐವತ್ತು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲಿಗೆ "ಎಪ್ಪತ್ತೈದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) "ನಲವತ್ತು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಅರವತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) "ಮೂರು ಲಕ್ಷ ರೂಪಾಯಿಗಳ" ಎಂಬ ಪದಗಳ ಬದಲಿಗೆ "ನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 4ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,-

(1) (1)ನೇ ಉಪಪ್ರಕರಣದಲ್ಲಿ, ``ಎಂಭತ್ತು ಸಾವಿರ ರೂಪಾಯಿಗಳ' ಎಂಬ ಪದಗಳ ಬದಲಿಗೆ `` ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) (2)ನೇ ಉಪಪ್ರಕರಣದಲ್ಲಿ, ``ಇಪ್ಪತ್ತು ಸಾವಿರ ರೂಪಾಯಿಗಳ'' ಎಂಬ ಪದಗಳ ಬದಲಿಗೆ ``ಮೂವತ್ತು ಸಾವಿರ ರೂಪಾಯಿಗಳ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**4. 5ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 5ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, "ಒಂದು ಸಾವಿರ ಲೀಟರು" ಎಂಬ ಪದಗಳ ಬದಲಿಗೆ "ಎರಡು ಸಾವಿರ ಲೀಟರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 6ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ, "ಒಂದು ಸಾವಿರ ಲೀಟರು" ಎಂಬ ಪದಗಳ ಬದಲಿಗೆ "ಎರಡು ಸಾವಿರ ಲೀಟರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. 6ಎ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 6ಎ ಪ್ರಕರಣದಲ್ಲಿ,-

(i) "ಮೂವತ್ತೈದು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಎರಡು ಲಕ್ಷ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಮೂರು ಲಕ್ಷ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 6ಬಿ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 6ಬಿ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ ``ಎಂಬತ್ತು ಸಾವಿರ ರೂಪಾಯಿಗಳ'' ಎಂಬ ಪದಗಳ ಬದಲಿಗೆ ``ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣದಲ್ಲಿ ``ಇಪ್ಪತ್ತು ಸಾವಿರ ರೂಪಾಯಿಗಳ'' ಎಂಬ ಪದಗಳ ಬದಲಿಗೆ ``ಮೂವತ್ತು ಸಾವಿರ ರೂಪಾಯಿಗಳ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 6ಸಿ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 6ಸಿ ಪ್ರಕರಣದ (2)ನೇ ಉಪಪ್ರಕರಣದಲ್ಲಿ, "ಒಂದು ಸಾವಿರ ಲೀಟರು" ಎಂಬ ಪದಗಳ ಬದಲಿಗೆ "ಒಂದು ಸಾವಿರದ ಐದುನೂರು ಲೀಟರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**9. 6ಡಿ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 6ಡಿ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ, "ಒಂದು ಸಾವಿರ ಲೀಟರುಗಳಿಗಿಂತ" ಎಂಬ ಪದಗಳ ಬದಲಿಗೆ "ಒಂದು ಸಾವಿರದ ಐದುನೂರು ಲೀಟರುಗಳಿಗಿಂತ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**10. 7ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 7ನೇ ಪ್ರಕರಣದಲ್ಲಿ,-

(i) "ಮೂವತ್ತು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ "ಎರಡು ಲಕ್ಷ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**11. 8ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 8ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ ``ಎಂಬತ್ತು ಸಾವಿರ ರೂಪಾಯಿಗಳ'' ಎಂಬ ಪದಗಳ ಬದಲಿಗೆ ``ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (2)ನೇ ಉಪಪ್ರಕರಣದಲ್ಲಿ ``ಇಪ್ಪತ್ತು ಸಾವಿರ ರೂಪಾಯಿಗಳ'' ಎಂಬ ಪದಗಳ ಬದಲಿಗೆ ``ಮೂವತ್ತು ಸಾವಿರ ರೂಪಾಯಿಗಳ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**12. 9ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 9ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, "ಒಂದು ಸಾವಿರ ಲೀಟರ್‌ಗೆ" ಎಂಬ ಪದಗಳ ಬದಲಿಗೆ "ಒಂದು ಸಾವಿರದ ಐದುನೂರು ಲೀಟರ್‌ಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**13. 9ಬಿ ಹೊಸ ಪ್ರಕರಣದ ಸೇರ್ಪಡೆ**.- ಮೂಲ ಅಧಿನಿಯಮದ 9ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"9ಬಿ. ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳಲ್ಲಿ ಹೆಚ್ಚಳ**.- ಮುಖ್ಯಮಂತ್ರಿ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪಮಂತ್ರಿಗಳ ಸಂಬಳ ಮತ್ತು ಭತ್ಯೆಗಳನ್ನು ಆದಾಯ ತೆರಿಗೆ ಅಧಿನಿಯಮ, 1961ರ 48ನೇ ಪ್ರಕರಣದ ವಿವರಣೆಯ ಖಂಡ (v)ರ ಅಡಿಯಲ್ಲಿ ಉಪಬಂಧಿಸಲಾದ ಬೆಲೆ ಏರಿಕೆ ಸೂಚ್ಯಂಕದ ಆಧಾರದ ಮೇಲೆ 2023ರ ಏಪ್ರಿಲ್ 1ನೇ ದಿನಾಂಕದಿಂದ ಪ್ರಾರಂಭವಾಗಿ ಪ್ರತಿ ಐದು ವರ್ಷಗಳ ತರುವಾಯ ಹೆಚ್ಚಳ ಮಾಡತಕ್ಕದ್ದು."

**14.. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿನ "ಒಂದು ಸಾವಿರ ಲೀಟರು" ಎಂಬ ಪದಗಳ ಬದಲಿಗೆ "ಒಂದು ಸಾವಿರದ ಐದುನೂರು ಲೀಟರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**15. 12ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 12ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,-

(i) (ಬಿ) ಖಂಡದಲ್ಲಿನ ``ಮೂವತ್ತು ರೂಪಾಯಿ' ಎಂಬ ಪದಗಳ ಬದಲಿಗೆ ``ನಲವತ್ತು ರೂಪಾಯಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಡಿ) ಖಂಡದಲ್ಲಿನ ``ಎರಡು ಸಾವಿರ ರೂಪಾಯಿಗಳ'' ಎಂಬ ಪದಗಳ ಬದಲಿಗೆ ``ಎರಡು ಸಾವಿರದ ಐದು ನೂರು ರೂಪಾಯಿಗಳ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಮೊದಲನೇ ಪರಂತುಕದಲ್ಲಿ ``ಎರಡು ಸಾವಿರದ ಐದು ನೂರು ರೂಪಾಯಿಗಳು'' ಎಂಬ ಪದಗಳ ಬದಲಿಗೆ ``ಮೂರು ಸಾವಿರ ರೂಪಾಯಿಗಳು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iv) ಮೂರನೇ ಪರಂತುಕದಲ್ಲಿ "ಐದು ಸಾವಿರ ರೂಪಾಯಿಗಳ" ಎಂಬ ಪದಗಳ ಬದಲಿಗೆ ``ಏಳು ಸಾವಿರ ರೂಪಾಯಿಗಳ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of the Karnataka Ministers Salaries And Allowances (Amendment) Act, 2022 (Karnataka Act 13 of 2022) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ